# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜನವರಿ 11, 2021

ಸಂಪುಟ : 47 ಸಂಚಿಕೆ : 252 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




**ಕಾಮಗಾರಿಗಾಗಿ ಕೆರೆ ಖಾಲಿ** ದಾವಣಗೆರೆ ನಗರದ ಕುಂದುವಾಡ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೆರೆಯ ನೀರನ್ನು ನಿಧಾನವಾಗಿ ಖಾಲಿ ಮಾಡಲಾಗುತ್ತಿದ್ದು, ಪಕ್ಷಿಗಳು ಕೆರೆಯ ನಡುಗಡ್ಡೆಯಲ್ಲಿ ಆಶ್ರಯ ಪಡೆಯುತ್ತಿವೆ.

### ಸಂಪುಟ ವಿಸ್ತರಣೆ ಕುರಿತಂತೆ ಕೇಂದ್ರದ ವರಿಷ್ಠರ ಜೊತೆಗೆ ಚರ್ಚೆ

# ಶೀಘ್ರ ಶುಭ ಸುದ್ದಿ: ಸಿಎಂ

ನವದೆಹಲಿ, ಜ. 10 - ಮಂತ್ರಿ ಮಂಡಲ ವಿಸ್ತರಣೆ ಕುರಿತಂತೆ ಕೇಂದ್ರದ ವರಿಷ್ಠರ ಜೊತೆಗೆ ಇಂದು ನಡೆದ ಸಭೆಯಲ್ಲಿ ಚರ್ಚೆ ನಡೆದಿದ್ದು, ಶೀಘ್ರದಲ್ಲೇ ಶುಭ ಸುದ್ದಿ ಸಿಗಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ನಿವಾಸದಲ್ಲಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಸಭೆಯ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

ಕೇಂದ್ರ ನಾಯಕರ ಜೊತೆಗಿನ ಸಭೆ ತಮಗೆ ತೃಪ್ತಿ, ಸಮಾಧಾನ ತಂದಿದೆ. ಮಂತ್ರಿ ಮಂಡಲ ವಿಸ್ತರಣೆ ಬಗ್ಗೆ ವಿಸ್ತೃತವಾದ ಚರ್ಚೆ ನಡೆದಿದೆ. ಕೇಂದ್ರ ನಾಯಕರಿಗೆ ಎಲ್ಲಾ ರೀತಿಯ ಮಾಹಿತಿಯನ್ನು ನೀಡಿದ್ದೇವೆ. ಆದಷ್ಟು ಶೀಘ್ರದಲ್ಲಿಯೇ ಶುಭ ಸುದ್ದಿ ಸಿಗುವ ವಿಶ್ವಾಸವಿದೆ ಎಂದವರು ತಿಳಿಸಿದ್ದಾರೆ. ಆದಾಗ್ಯೂ, ಮಂತ್ರಿ ಮಂಡಲ ವಿಸ್ತರಣೆಯೇ ಅಥವಾ ಪುನರ್‌ರಚನೆಯೋ ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿಸದ ಮುಖ್ಯಮಂತ್ರಿ, ಈ ವಿಚಾರದಲ್ಲಿ ಕೇಂದ್ರ ನಾಯಕರು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದಷ್ಟೇ ಪ್ರತಿಕ್ರಿಯಿಸಿದರು

**ಕಳೆದ ಒಂದು ವರ್ಷದಿಂದ ಸಂಪುಟ ವಿಸ್ತರಣೆ ಬಾಕಿ ಉಳಿದಿದೆ. ಆದರೆ, ಹಲವಾರು ಕಾರಣಗಳಿಂದ ವಿಸ್ತರಣೆಯಾಗದೇ ಇರುವುದು ಆಕಾಂಕ್ಷಿಗಳಲ್ಲಿ ಅಸಮಾಧಾನಕ್ಕೂ ಕಾರಣವಾಗಿದೆ.**

ಅಮಿತ್ ಷಾ ಜೊತೆ ನಡೆಸಲಾದ ಚರ್ಚೆ ಸಂದರ್ಭದಲ್ಲಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸಹ ಉಪಸ್ಥಿತರಿದ್ದರು. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನೂ ಯಡಿಯೂರಪ್ಪ ಭೇಟಿ ಮಾಡಿದ್ದಾರೆ.

ಚರ್ಚೆಯಿಂದ ನನಗೆ ಸಂತೋಷವಾಗಿದೆ. ಅವರ ಸೂಚನೆಗಳಿಗಾಗಿ ನಾವು ಕಾಯುತ್ತಿದ್ದೇವೆ. ಆದಷ್ಟು ಶೀಘ್ರ ಅಂತಿಮ ಹೆಸರುಗಳು ಬಿಡುಗಡೆಯಾಗಲಿವೆ ಎದವರು ಹೇಳಿದ್ದಾರೆ.

ಸಂಪುಟ ವಿಸ್ತರಣೆ ಕುರಿತು ಹೈಕಮಾಂಡ್ ಜೊತೆಗೆ ಇದು ಕೊನೆಯ ಭೇಟಿಯೇ ಎಂಬ ಪ್ರಶ್ನೆಗೆ ಉತ್ತರಿಸಿರುವ ಅವರು, ಇದು ಕೊನೆಯ ಭೇಟಿ ಎಂಬುದು ಶೇ.101ರಷ್ಟು ಖಚಿತ. ಶೀಘ್ರದಲ್ಲೇ ಅವರು ಹೆಸರುಗಳನ್ನು ಬಿಡುಗಡೆ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ಗ್ರಾಮ ಪಂಚಾಯಿತಿ ಚುನಾವಣೆ ಫಲಿತಾಂಶ ವರಿಷ್ಠರಿಗೆ ಸಂತೋಷವನ್ನುಂಟು ಮಾಡಿದ್ದು, ಮುಂಬರುವ ಲೋಕಸಭಾ, ವಿಧಾನಸಭಾ ಉಪ ಚುನಾವಣೆಯಲ್ಲಿ ಉತ್ತಮ ಫಲಿತಾಂಶಕ್ಕೆ ಪ್ರಯತ್ನಿಸುವಂತೆ ಸಲಹೆ ನೀಡಿದ್ದಾರೆ. ಆಕಾಂಕ್ಷಿಗಳ ಪಟ್ಟಿಯನ್ನು ಶೀಘ್ರದಲ್ಲಿಯೇ **(2ನೇ ಪುಟಕ್ಕೆ)**

# ಕೊರೊನಾ ಲಸಿಕೆಗೆ 'ಕೊ-ವಿನ್' ಆಧಾರ: ಕೇಂದ್ರ

ನವದೆಹಲಿ, ಜ. 10 - ಕೊರೊನಾ ಲಸಿಕೆಗಾಗಿ ರೂಪಿಸಲಾಗಿರುವ ಕೊ-ವಿನ್ ಆನ್‌ಲೈನ್ ವೇದಿಕೆಯು ಲಸಿಕಾ ಅಭಿಯಾನಕ್ಕೆ ಆಧಾರವಾಗಿರಲಿದೆ. ನಾಗರಿಕ ಕೇಂದ್ರಿತ ಈ ವ್ಯವಸ್ಥೆ ಯಾವುದೇ ಸಮಯದಲ್ಲಿ ಹಾಗೂ ಎಲ್ಲರಿಗೂ ಲಭ್ಯವಿರಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಜನವರಿ 16ರಿಂದ ಕೊರೊನಾ ಲಸಿಕೆ ನೀಡುವುದಕ್ಕೆ ಚಾಲನೆ ನೀಡಲಾಗುವುದು. ಇದು ವಿಶ್ವದ ಅತಿ ದೊಡ್ಡ ಕೊರೊನಾ ಲಸಿಕೆ ಅಭಿಯಾನವಾಗಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮೊದಲ ಹಂತದಲ್ಲಿ 3 ಕೋಟಿ ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುವುದು.

**ಕೊ-ವಿನ್ ಕಾರ್ಯ ನಿರ್ವಹಣೆ ನಾಗರಿಕ ಕೇಂದ್ರೀಕೃತವಾಗಿರಲಿದೆ. ಯಾವುದೇ ಸಮಯದಲ್ಲಿ ಹಾಗೂ ಎಲ್ಲರಿಗೂ ಲಸಿಕೆ ಲಭ್ಯವಾಗುವ ರೀತಿಯಲ್ಲಿ ತಂತ್ರಾಂಶ ರೂಪಿಸಲಾಗಿದೆ.**

**-ರಾಮ್ ಸೇವಕ್ ಶರ್ಮಾ**

ಈ ಅಭಿಯಾನದ ಹಿನ್ನೆಲೆಯಲ್ಲಿ ಭಾನುವಾರದಂದು ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳ ಅಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚೆ ನಡೆಸಿ, ಕೊ - ವಿನ್ ತಂತ್ರಾಂಶದ ಬಳಕೆ ಹಾಗೂ ಲಸಿಕಾ ತಾಲೀಮಿನ ಕುರಿತು ವಿವರ ಪಡೆದಿದ್ದಾರೆ.

ಕೊರೊನಾ ವಿರುದ್ಧ ಹೋರಾಟಕ್ಕೆ ರೂಪಿಸಲಾಗಿರುವ ಉನ್ನತ ಸಶಕ್ತ ಸಮಿತಿಯ ಅಧ್ಯಕ್ಷ ರಾಮ್ ಸೇವಕ್ ಶರ್ಮಾ ಅವರ ನೇತೃತ್ವದಲ್ಲಿ ವಿಡಿಯೋ ಸಮಾಲೋಚನೆ ನಡೆಸಲಾಯಿತು.

ಗುಣಮಟ್ಟದ ಜೊತೆ ಹೊಂದಾಣಿಕೆ ಮಾಡಿಕೊಳ್ಳದೇ ಲಸಿಕೆ ನೀಡುವ ಬಗ್ಗೆ ಮೃದುತ್ವ ಹೊಂದಬೇಕಿದೆ. ಅನಗತ್ಯ ತೊಡಕುಗಳು ಎದುರಾಗದ ರೀತಿಯಲ್ಲಿ ತಂತ್ರಾಂಶವನ್ನು **(2ನೇ ಪುಟಕ್ಕೆ)**

# ಮೂರು ಶಾಪಗಳಿಂದ ಕಾಂಗ್ರೆಸ್ ಅವನತಿ

### ಹೊನ್ನಾಳಿ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್



ಹೊನ್ನಾಳಿ, ಜ.10- ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಗೋಮಾತೆ ಶಾಪದಿಂದ ಭಾರತ ಕಾಂಗ್ರೆಸ್ ಮುಕ್ತವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ತಾಲ್ಲೂಕು ಬಿಜೆಪಿ ಘಟಕದ ವತಿಯಿಂದ ಪಟ್ಟಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯಿತಿ ನೂತನ ಸದಸ್ಯರ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯವರು ಸ್ವಾತಂತ್ರ್ಯಾ ನಂತರ ಕಾಂಗ್ರೆಸ್ ವಿಸರ್ಜಿಸಿ ಎಂದು ಹೇಳಿದ್ದರೂ ವಿಸರ್ಜಿಸದೆ ಗಾಂಧೀಜಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ನಂತರದ ದಿನಗಳಲ್ಲಿ ಗಾಂಧೀಜಿಯವರ ಅನೇಕ ಯೋಜನೆಗಳನ್ನು ಗಾಳಿಗೆ ತೂರಿದ ಪರಿಣಾಮ ಗಾಂಧೀಜಿಯವರ ಶಾಪಕ್ಕೆ ಗುರಿಯಾಗಿದೆ.

ಸಂವಿಧಾನ ರಚಿಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಿದ್ದು ಅಲ್ಲದೆ ಚುನಾವಣೆಯಲ್ಲಿ ಅವರ ವಿರುದ್ಧ ಬೇರೊಬ್ಬ ಅಭ್ಯರ್ಥಿ ಸ್ಪರ್ಧಿಸುವಂತೆ ಕಾಂಗ್ರೆಸ್ ತಂತ್ರ ಮಾಡಿತು. ಅಲ್ಲದೆ ಅವರ ನಿಧನದ ನಂತರ ದೆಹಲಿಯಲ್ಲಿ ಅವರ ಅಂತ್ಯಕ್ರಿಯೆಗೆ ಜಾಗ ಕೊಡದೆ ಅವರಿಗೆ ಅವಮಾನ ಮಾಡಿದ್ದರ ಪರಿಣಾಮ ಡಾ. ಬಿ.ಆರ್.ಅಂಬೇಡ್ಕರ್ ಅವರ ಶಾಪಕ್ಕೆ ಗುರಿಯಾಯಿತು. ಇಂದಿರಾ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಚಿಹ್ನೆಯಲ್ಲಿ ಹಸು ಕರು ಇತ್ತು. ಅಲ್ಪ ಸಂಖ್ಯಾತರ ಮತ ಬ್ಯಾಂಕ್‌ಗಾಗಿ ಗೋಹತ್ಯೆ **(4ನೇ ಪುಟಕ್ಕೆ)**

## 14ರಿಂದ ಪಂಚಮಸಾಲಿ ಹರ ಜಾತ್ರೆಗೆ ವರ್ಚ್ಯುಯಲ್ - ವೇದಿಕೆ ಎರಡೂ ವ್ಯವಸ್ಥೆಗೆ ಸಿದ್ಧತೆ

ದಾವಣಗೆರೆ, ಜ.10- ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಇದೇ ದಿನಾಂಕ 14 ಮತ್ತು 15ರಂದು ಹರ ಜಾತ್ರೋತ್ಸವ ನಡೆಯಲಿದೆ.

ಹರ ಜಾತ್ರೆಯು ಕೋವಿಡ್ ಹಿನ್ನೆಲೆಯಲ್ಲಿ ವರ್ಚ್ಯುಯಲ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ, ಈಗ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಣೆ ಹೊಂದಿರುವ ಹಿನ್ನೆಲೆಯಲ್ಲಿ ವರ್ಚ್ಯುಯಲ್‌ನ ಮತ್ತು ವೇದಿಕೆ ಕಾರ್ಯಕ್ರಮ ಎರಡೂ ವ್ಯವಸ್ಥೆಯಲ್ಲಿ ನಡೆಯಲಿದೆ ಎಂದು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಹರ ಜಾತ್ರಾ ಸಮಿತಿ ಅಧ್ಯಕ್ಷ ಬಿ. ಲೋಕೇಶ್ ಅವರುಗಳು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜಾತ್ರೆಗೆ ಜರ್ಮನಿ ತಂತ್ರಜ್ಞಾನದಿಂದ ವೇದಿಕೆ ರೂಪಿಸಲ್ಪಡುವುದು. 80×60 ಅಡಿಯಲ್ಲಿ ವೇದಿಕೆ ನಿರ್ಮಿಸಲಿದ್ದು, ಸಾಮಾಜಿಕ ಅಂತರದಡಿ 20ರಿಂದ 25 ಸಾವಿರ ಜನರು ಕುಳಿತುಕೊಳ್ಳಲು ಆಸನ ವ್ಯವಸ್ಥೆ ಮಾಡಲಾಗಿದೆ. ವೀರಶೈವ ಲಿಂಗಾಯತ ಪಂಚಮಸಾಲಿ ಶ್ರೀಕ್ಷೇತ್ರದ ನಾಲ್ಕು ಕಿ.ಮೀ. ವ್ಯಾಪ್ತಿಯಲ್ಲಿ ವರ್ಚ್ಯುಯಲ್‌ನಿಂದ ಕಾರ್ಯಕ್ರಮವನ್ನು ವೀಕ್ಷಿಸಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಆ್ಯಪ್ ಮೂಲಕ ಮೊಬೈಲ್‌ನಲ್ಲೂ ವೀಕ್ಷಿಸಬಹುದಾಗಿದೆ ಎಂದರು.

ದಿನಾಂಕ 14ರ ಬೆಳಗ್ಗೆ 11.30ಕ್ಕೆ ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ಹರದ್ವಾರ ಉದ್ಘಾಟಿಸುವರು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಂಕ್ರಾಂತಿ ಸಂಭ್ರಮ ಉದ್ಘಾಟಿಸುವರು. **(4ನೇ ಪುಟಕ್ಕೆ)**

## ಶಾಲೆ ಹೊರಗಿರುವ ಮಕ್ಕಳ ಸಮೀಕ್ಷೆಗೆ ಕೇಂದ್ರದ ಸೂಚನೆ

ನವದೆಹಲಿ, ಜ. 10 - ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಲು ಮನೆ ಮನೆ ಸಮೀಕ್ಷೆ ನಡೆಸುವಂತೆ ರಾಜ್ಯಗಳಿಗೆ ಕೇಂದ್ರ ಶಿಕ್ಷಣ ಸಚಿವಾಲಯ ತಿಳಿಸಿದೆ.

ಕೊರೊನಾ ಸಮಯದಲ್ಲಿ ಶಿಕ್ಷಣದ ಮೇಲೆ ಆಗಿರುವ ಪರಿಣಾಮವನ್ನು ನೀಗಿಸಲು ಕ್ರಿಯಾ ಯೋಜನೆ ರೂಪಿಸುವ ಮೂಲಕ ಮಕ್ಕಳನ್ನು ಶಾಲೆಗೆ ನೋಂದಣಿ ಮಾಡಿಕೊಳ್ಳಬೇಕೆಂದು ಕೇಂದ್ರ ಸರ್ಕಾರ ಹೇಳಿದೆ.

ಆರರಿಂದ 18 ವರ್ಷದವರೆಗಿನವರು ಶಾಲೆಯಿಂದ ಹೊರಗುಳಿದಿರುವ ಬಗ್ಗೆ ಮನೆ ಮನೆ ಸಮೀಕ್ಷೆ ನಡೆಸಬೇಕು ಹಾಗೂ ಅವರ ಶಾಲಾ ದಾಖಲಾತಿಗೆ ಕ್ರಿಯಾ ಯೋಜನೆ ರೂಪಿಸಬೇಕು ಎಂದು ತಿಳಿಸಲಾಗಿದೆ.

## ಅನರ್ಹ ರೈತರಿಗೆ 1,364 ಕೋಟಿ ರೂ. ಪಾವತಿ

**ಪಿಎಂ ಕಿಸಾನ್ ಯೋಜನೆ**

ನವದೆಹಲಿ, ಜ. 10 - ಪ್ರಧಾನ ಮಂತ್ರಿ ಕಿಸಾನ್ ಯೋಜನೆಯ ಅನ್ವಯ ಕೇಂದ್ರ ಸರ್ಕಾರ ಅರ್ಹರಲ್ಲದ 20.48 ಲಕ್ಷ ರೈತರಿಗೆ 1,364 ಕೋಟಿ ರೂ.ಗಳನ್ನು ಪಾವತಿಸಿದೆ ಎಂದು ಮಾಹಿತಿ ಹಕ್ಕು ಅರ್ಜಿಯೊಂದಕ್ಕೆ ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

2019ರಲ್ಲಿ ಜಾರಿಗೆ ತಂದ ಪಿಎಂ ಕಿಸಾನ್ ಯೋಜನೆಯ ಅನ್ವಯ ಪ್ರತಿ ವರ್ಷ ರೈತರಿಗೆ **(2ನೇ ಪುಟಕ್ಕೆ)**







## ಆಸ್ಟ್ರೇಲಿಯಾ : ಭಾರತೀಯ ಕ್ರಿಕೆಟಿಗರಿಗೆ ಜನಾಂಗೀಯ ಅವಹೇಳನ

ಸಿಡ್ನಿ/ನವದೆಹಲಿ ಜ. 10 – ಆಸ್ಟ್ರೇಲಿಯಾ ವಿರುದ್ಧ ನಡೆಯುತ್ತಿರುವ ಮೂರನೇ ಟೆಸ್ಟ್‌ನ ನಾಲ್ಕನೇ ದಿನ ಭಾರತದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಸೇರಿದಂತೆ ಹಲವು ಆಟಗಾರರು ಪ್ರೇಕ್ಷಕರಿಂದ ಜನಾಂಗೀಯ ನಿಂದನೆಗೆ ಗುರಿಯಾಗಿದ್ದಾರೆ. ಜನಾಂಗೀಯ ನಿಂದನೆ ಮಾಡಿದ ಹಲವು ಪ್ರೇಕ್ಷಕರನ್ನು ಕ್ರೀಡಾಂಗಣದಿಂದ ಹೊರಕ್ಕೆ ಕಳಿಸಲಾಗಿದೆ.

ಕಳೆದ ತಿಂಗಳಷ್ಟೇ ತಂದೆಯನ್ನು ಕಳೆದುಕೊಂಡ ಶೋಕದಲ್ಲಿರುವ ಸಿರಾಜ್ ಅವರನ್ನು ಕಂದು ನಾಯಿ ಹಾಗೂ ದೊಡ್ಡ ಕೋತಿ ಎಂದೆಲ್ಲಾ ಎಸ್.ಸಿ.ಜಿ. ಮೈದಾನದ ಪ್ರೇಕ್ಷಕರು ಅವಹೇಳನ ಮಾಡಿದ್ದಾರೆ ಎಂದು ಬಿ.ಸಿ.ಸಿ.ಐ. ಮೂಲಗಳು ತಿಳಿಸಿವೆ.

ಸಿರಾಜ್ ಈ ಬಗ್ಗೆ ತಂಡದ ನಾಯಕ ಅಜಿಂಕ್ಯ ರಹಾನೆ ಹಾಗೂ ಅಂಪೈರ್‌ಗಳಿಗೆ ತಿಳಿಸಿದ್ದಾರೆ. ಅವರು ಹತ್ತು ನಿಮಿಷಗಳ ಕಾಲ ಆಟ ನಿಲ್ಲಿಸಿ ಭದ್ರತಾ ಸಿಬ್ಬಂದಿಗೆ ಕರೆಸಿದರು. ನಂತರ ಆರು ಜನರನ್ನು ಮೈದಾನದಿಂದ ಹೊರಕ್ಕೆ ಕಳಿಸಲಾಯಿತು. ಶನಿವಾರದಂದೂ ಸಿರಾಜ್ ಹಾಗೂ ವೇಗದ ಬೌಲರ್ ಜಸ್‌ಪ್ರಿತ್ ಬುಮ್ರಾ ಅವರು ಪಾನಮತ್ತ ಪ್ರೇಕ್ಷಕನೋರ್ವನ ಅವಹೇಳನಗಳನ್ನು ಎದುರಿಸಬೇಕಾಯಿತು. ಈ ಬಗ್ಗೆ ಐಸಿಸಿ ರೆಫ್ರೀ ಡೇವಿಡ್ ಬೂನ್ ಅವರಿಗೆ ದೂರು ಸಲ್ಲಿಸಲಾಗಿದೆ.

ಘಟನೆಯ ಬಗ್ಗೆ ಹೇಳಿಕೆ ನೀಡಿರುವ ಕ್ರಿಕೆಟ್ ಆಸ್ಟ್ರೇಲಿಯಾ, ಭಾರತೀಯ ಕ್ರಿಕೆಟ್ ತಂಡದ ಬಳಿ ಕ್ಷಮೆ ಯಾಚಿಸಿದೆ. ಜನಾಂಗೀಯವಾದವನ್ನು ಎಳ್ಳಷ್ಟೂ ಸಹಿಸುವುದಿಲ್ಲ ಎಂದೂ ಸಹ ತಿಳಿಸಲಾಗಿದೆ.

## ನಗರದಲ್ಲಿಂದು ಮಾರ್ಕಂಡೇಶ್ವರ ಕಾರ್ತಿಕ

ಶ್ರೀ ಕನ್ನಿಕಾಪರಮೇಶ್ವರಿ ದೇವ ಸ್ಥಾನ ರಸ್ತೆಯಲ್ಲಿರುವ ಶ್ರೀ ಮಾರ್ಕ ಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಕಡೆ ಕಾರ್ತಿಕೋತ್ಸವ ಹಮ್ಮಿಕೊಳ್ಳಲಾಗಿದೆ. ಪ್ರಯುಕ್ತ ಬೆಳಿಗ್ಗೆ 8 ಗಂಟೆಗೆ ಪಂಚಾಮೃತ ಅಭಿಷೇಕ ನಡೆಯಲಿದೆ. ಸಂಜೆ ಮಹಾಪೂಜೆ, ರಾತ್ರಿ 7 ಕ್ಕೆ ಕಾರ್ತಿಕೋತ್ಸವ ನೆರವೇರಲಿದೆ ಎಂದು ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಪಿ.ಜೆ. ನಾಗರಾಜ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ,ಬಿ, 'ಸಿ' ಬ್ಲಾಕ್, ಜೀವನ್ ಬಿಮಾ ನಗರ, ಚಿಕ್ಕಮ್ಮಣ್ಣಿ ದೇವರಾಜ್ ಅರಸ್ ಬಡಾವಣೆ, ಜಯನಗರ ಎ ಮತ್ತು ಬಿ ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಸಾಯಿಬಾಬಾ ದೇವಸ್ಥಾನದ ಸುತ್ತಮುತ್ತ, ಲಕ್ಷ್ಮಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಪ್ರಗತಿಗೆ ಬುನಾದಿಯಾಗಿರುವ ಶಿಕ್ಷಣಕ್ಕೆ ಪ್ರತಿಯೊಬ್ಬರೂ ಆದ್ಯತೆ ನೀಡಬೇಕು

### ಹರಪನಹಳ್ಳಿ : ಕುರುಬ ನೌಕರರ ಸಂಘದ ಕಾರ್ಯಕ್ರಮದಲ್ಲಿ ಜಿ.ಪಂ. ಸದಸ್ಯ ಪರಶುರಾಮಪ್ಪ ಕರೆ



ಹರಪನಹಳ್ಳಿ, ಜ.10- ಶಿಕ್ಷಣ, ಎಲ್ಲಾ ಪ್ರಗತಿಗೆ ಭದ್ರಬುನಾದಿಯಾಗಿದ್ದು ಪ್ರತಿಯೊಬ್ಬರೂ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ನೀಲಗುಂದ ಕ್ಷೇತ್ರದ ಜಿಲ್ಲಾ ಪಂಚಾಯ್ತಿ ಸದಸ್ಯ ಹೆಚ್.ಬಿ.ಪರಶುರಾಮಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ತಾಲ್ಲೂಕು ಕುರುಬ ನೌಕರರ ಸಂಘದಿಂದ ನಿನ್ನೆ ಏರ್ಪಡಿಸಿದ್ದ ದಾಸ ಶ್ರೇಷ್ಠ ಭಕ್ತ ಕನಕದಾಸರ 533ನೇ ಜಯಂತ್ಯೋತ್ಸವ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಿದರೆ ಸಾಧನೆ ಸುಲಭವಾಗುತ್ತದೆ. ಪ್ರತಿಭೆಗಳನ್ನು ಹೊರಹಾಕಲು ಅಭ್ಯಾಸ ಮುಖ್ಯ. ಅದು ಪರಿಶ್ರಮದಿಂದ ದೊರಕಲಿದ್ದು, ಆ ನಿಟ್ಟಿನಲ್ಲಿ ಹೆಜ್ಜೆ ಹಾಕಬೇಕು. ಕುರುಬ ಸಮಾಜವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಕುಲಶಾಸ್ತ್ರ ಅಧ್ಯಯನ ಸಾಗುತ್ತಿದ್ದು, ಶೀಘ್ರದಲ್ಲೇ ಮುಗಿಯುವ ಹಂತದಲ್ಲಿದ್ದು ಸರ್ಕಾರಕ್ಕೆ ವರದಿ ನೀಡಲಿದ್ದಾರೆ. ಅದರ ಜೊತೆ ಎಸ್‌ಟಿ ಮೀಸಲಾತಿಯನ್ನು ಶೇ.12ಕ್ಕೆ ಹೆಚ್ಚಿಸಲು ಹೋರಾಟ ಮಾಡಲಿದ್ದೇವೆ ಎಂದರು.

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಆನಂದ ಡೊಳ್ಳಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕುರುಬ ಸಮಾಜ ಅತಿ ಹಿಂದುಳಿದಿದೆ.

ಶೈಕ್ಷಣಿಕ ರಂಗದಲ್ಲಿ ಶೇ.40ರಷ್ಟು ಮಾತ್ರ ಅಕ್ಷರಸ್ಥರಿದ್ದಾರೆ. ಮುಖ್ಯವಾಹಿನಿಗೆ ಸಮಾಜ ದಾಪುಗಾಲು ಹಾಕಲು ಶಿಕ್ಷಣ ಅವಶ್ಯಕವಾಗಿದೆ. ನೈತಿಕ ಪರಿಶ್ರಮದಿಂದ ಸಮಾಜ ಬಾಂಧವರು ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದರು.

ತೆಲಗಿ ಕ್ಷೇತ್ರದ ಜಿಲ್ಲಾ ಪಂಚಾಯ್ತಿ ಸದಸ್ಯರಾದ ಶ್ರೀಮತಿ ಜಯಶೀಲಾ ಕೆ.ಆರ್. ಮಾತನಾಡಿ, ಸಮಾಜದ ಅಸಮಾನತೆ ಹೋಗಲಾಡಿಸಲು ದಾಸ ಸಾಹಿತ್ಯ ಸಹಾಯಕವಾಗಿದೆ. ದಾಸ ಸಾಹಿತ್ಯದ ವಚನಗಳಿಂದ ಕನಕದಾಸರು ಶ್ರೇಷ್ಠರು. ಅವರ ಆದರ್ಶ ತತ್ವಗಳನ್ನು ನಾವು ಅಳವಡಿಸಿಕೊಂಡು ಹಿಂದುಳಿದ ಪಟ್ಟವನ್ನು ಹೋಗಲಾಡಿಸಬೇಕು. ಸಮಾಜದ ಶಿಕ್ಷಣವಂತರು, ಅಧಿಕಾರಿಗಳು ಸಮಾಜದ ಋಣ ತೀರಿಸಲು ಸಹಾಯ, ಸಹಕಾರ ನೀಡಬೇಕು. ಪರಿಶಿಷ್ಟ ಪಂಗಡದ ಮೀಸಲಾತಿ ನಮ್ಮ ಹಕ್ಕು. ಎಲ್ಲಾ ರಂಗದಲ್ಲಿ ಪ್ರಗತಿ ಸಾಧಿಸಲು ಮೀಸಲಾತಿ ಅವಶ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನಿಸಲಾಯಿತು.

ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ವೈ.ಕೆ.ಬಿ.ದುರುಗಪ್ಪ, ತಾಲ್ಲೂಕು ಕುರುಬ ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ, ಕುರುಬ ಸಮಾಜದ ಕಾರ್ಯದರ್ಶಿ ಸಾಬಳ್ಳಿ ಜಂಬಣ್ಣ, ಪುರಸಭೆ ಸದಸ್ಯ ಜೋಗಿನ ಭರತೇಶ್, ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮರಾಜ ಜೈನ್, ದಾದಾ ಖಲಂದರ್, ಮುಖಂಡರಾದ ಬಿ.ತಿಮ್ಮಪ್ಪ, ದುರುಗಪ್ಪ ಹೊನ್ನೂರು, ವೆಂಕಟೇಶ್ ಬಾಗಲಾರ್, ವಕೀಲರುಗಳಾದ ಮೈದೂರು ಮಲ್ಲಿಕಾರ್ಜುನ, ಬಂಡ್ರಿ ಗೋಣಿಬಸಪ್ಪ, ಹುಚ್ಚಪ್ಪ, ಅಂಜಿನಪ್ಪ ಕಮತರ್, ಚೆನ್ನಪ್ಪ ಕಂಬಳಿ, ಗಣೇಶಪ್ಪ, ಎಸ್.ಪಂಪಾಪತಿ ಕಾಮತೇಶ್, ಮಲ್ಲಪ್ಪ, ಮಲ್ಲಿಕಾರ್ಜುನ ಹಾಗೂ ಇತರರು ಭಾಗವಹಿಸಿದ್ದರು.

## ದಾವಣಗೆರೆಯಲ್ಲಿ ರೈಲ್ವೆ ಮ್ಯೂಸಿಯಂ ಸ್ಥಾಪನೆ : ಕೇಂದ್ರ ಸಚಿವರಿಗೆ ಮನವಿ

ದಾವಣಗೆರೆ, ಜ.10- ನಗರದಲ್ಲಿ ರೈಲ್ವೆ ಮ್ಯೂಸಿಯಂ ಸ್ಥಾಪನೆ ಮಾಡಲು 2021-22ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಅಗತ್ಯ ಅನುದಾನ ಮೀಸಲಿಡುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕೇಂದ್ರ ರೈಲ್ವೆ ಸಚಿವ ಪಿಯೂಷ್ ಗೋಯಲ್ ಅವರಿಗೆ ಹಾಗೂ ರೈಲ್ವೆ ಮಂಡಳಿ ಅಧ್ಯಕ್ಷ ಸನೀತ್ ಶರ್ಮಾ ಅವರಿಗೆ ಮನವಿ ಸಲ್ಲಿಸಿದ್ದಾರೆ.

ದಾವಣಗೆರೆಯಲ್ಲಿ ರೈಲ್ವೆ ಮ್ಯೂಸಿಯಂ ಸ್ಥಾಪನೆ ಮಾಡಲು ಅಗತ್ಯವಾದ ಜಾಗ ಲಭ್ಯವಿದ್ದು, ಹೊಸ ರೈಲ್ವೆ ನಿಲ್ದಾಣ ಕೂಡ ಸಿದ್ದಗೊಳ್ಳುತ್ತಿದೆ. ಮ್ಯೂಸಿಯಂ ಮಾಡಿದರೆ ನಗರಕ್ಕೆ ಮತ್ತಷ್ಟು ಮೆರಗು ಸಿಗಲಿದೆ ಎಂದು ಮನವಿಯಲ್ಲಿ ಸಿದ್ದೇಶ್ವರ ತಿಳಿಸಿದ್ದಾರೆ.

ಹರಿಹರ ನಗರ ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವುದು, ತೋಳಹುಣಸೆ ಬಳಿ ಸಬ್ ವೇ ನಿರ್ಮಾಣ, ಹೊಸಪೇಟೆ-ಕೊಟ್ಟೂರು ಪ್ಯಾಸೆಂಜರ್ ರೈಲನ್ನು ಅರಸೀಕೆರೆ, ಚಿಕ್ಕಮಗಳೂರುವರೆಗೆ ವಿಸ್ತರಿಸುವುದು, ವಾರದಲ್ಲಿ ಮೂರು ಬಾರಿ ದಾವಣಗೆರೆ ಮಾರ್ಗವಾಗಿ ಯಶವಂತಪುರ-ಪುಣೆಗೆ ಹೊಸ ರೈಲು ಓಡಿಸುವುದು ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಸಂಸದರು ಮನವಿ ಮಾಡಿಕೊಂಡಿದ್ದಾರೆ.

## ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ದಾವಣಗೆರೆ, ಜ.10- ದಾವಣಗೆರೆ ಜಿಲ್ಲೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿ ಸಂಬಂಧ ಜ.7 ರನ್ವಯ ಪ್ರಥಮ ತಾತ್ಕಾಲಿಕ ಆಯ್ಕೆ ಪಟ್ಟಿ ಹೊರಡಿಸಲಾಗಿದೆ. ಈ ಆಯ್ಕೆ ಪಟ್ಟಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಅಳವಡಿಸಲಾಗಿದ್ದು, ಈ ಬಗ್ಗೆ ಅಭ್ಯರ್ಥಿಗಳು ಕಚೇರಿ ವೇಳೆಯಲ್ಲಿ ಬಂದು ಪರಿಶೀಲಿಸಬಹುದಾಗಿದೆ ಹಾಗೂ ಈ ಕಚೇರಿ ವೆಬ್‌ಸೈಟ್ ವಿಳಾಸ www.dvgpolice.in ಇಲ್ಲಿ ಸಹ ವೀಕ್ಷಿಸಬಹುದಾಗಿದೆ ಎಂದು ಪೊಲೀಸ್ ಅಧೀಕ್ಷಕ ಹನುಮಂತರಾಯ ತಿಳಿಸಿದ್ದಾರೆ.

## ಶ್ರೀ ಸಂಜೀವಿನಿ ಆಂಜನೇಯ ಕಾರ್ತಿಕ

ದಾವಣಗೆರೆ, ಜ.10- ಬೂದಾಳ್ ರಸ್ತೆ, ಚೌಡೇಶ್ವರಿ ನಗರದ ಶ್ರೀ ಸಂಜೀವಿನಿ ಆಂಜನೇಯ ಸೇವಾ ಸಮಿತಿ ವತಿಯಿಂದ ಶ್ರೀ ಸ್ವಾಮಿಯ ಕಾರ್ತಿಕೋತ್ಸವ ನಿನ್ನೆ ನಡೆಯಿತು.

## 'ಗ್ರಾ.ಪಂ. ಮಕ್ಕಳ ಸ್ನೇಹಿ' ಅಭಿಯಾನ ಎಲ್ಲಾ ಶಾಲೆಗಳಲ್ಲಿ ಅಳವಡಿಸಬೇಕು



**ಹರಪನಹಳ್ಳಿ**

ಹರಪನಹಳ್ಳಿ, ಜ.10- ಗ್ರಾಮ ಪಂಚಾಯತಿ ಮಕ್ಕಳ ಸ್ನೇಹಿ ಅಭಿಯಾನ ಕಾರ್ಯಕ್ರಮವನ್ನು ಎಲ್ಲಾ ಶಾಲೆಗಳಲ್ಲಿ ಅಳವಡಿಸುವಂತೆ ಎಂದು ಬಿಆರ್‌ಪಿ ನಾಗರಾಜ್ ಹೇಳಿದ್ದಾರೆ.

ತಾಲ್ಲೂಕಿನ ಹೊಸಕೋಟೆ ಗ್ರಾಮ ಪಂಚಾಯತಿಯಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನದಡಿ ಸಮುದಾಯ ಆಧಾರಿತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳನ್ನು ಪೋಷಕರು ಶಾಲೆಯನ್ನು ಅರ್ಧಕ್ಕೆ ಬಿಡಿಸಿ ಬಾಲ್ಯ ವಿವಾಹದಂತಹ ತಪ್ಪು ಮಾಡುತ್ತಾರೆ. ಏನೂ ತಿಳಿಯದ ಮಗುವನ್ನು ಸಂಕಷ್ಟಕ್ಕೆ ದೂಡುತ್ತಾರೆ. ಇಂತಹ ದುಷ್ಟ ಪರಿಣಾಮದಿಂದ ಆಗುವ ಅನಾಹುತಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು.

ಕಾನೂನು ಮತ್ತು ಕಾಯ್ದೆ ಬಗ್ಗೆ ಪೋಷಕರಿಗೆ ತಿಳುವಳಿಕೆ ನೀಡಬೇಕು. ಸಮುದಾಯ ಆಧಾರಿತ ಕಾರ್ಯಕ್ರಮ ಮತ್ತು ಓದು ಬೆಳಕು ಕಾರ್ಯಕ್ರಮದಡಿಯಲ್ಲಿ ವಿವಿಧ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು.

ಅಣಜಿಗೇರಿ ಗ್ರಾಮ ಪಂಚಾಯತಿಯಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಸಿಆರ್‌ಪಿ ಪರಶುರಾಮಪ್ಪ ಮತ್ತಿತರರು ಭಾಗವಹಿಸಿದ್ದರು.

## 'ಕೊ-ವಿನ್' ಆಧಾರ: ಕೇಂದ್ರ ಸರ್ಕಾರ

**(1ನೇ ಪುಟದಿಂದ)** ಜಾರಿಗೆ ತರಬೇಕಿದೆ ಎಂದು ಶರ್ಮ ತಿಳಿಸಿದ್ದಾರೆ.


ಕೊರೊನಾ ಲಸಿಕೆಗಾಗಿ ಆಧಾರ್ ವೇದಿಕೆ ಬಳಸಿಕೊಳ್ಳುವ ಕುರಿತು ಮಾತನಾಡಿರುವ ಶರ್ಮ, ಫಲಾನುಭವಿಗಳು ಆಧಾರ್ ಕಾರ್ಡ್ ಜೊತೆ ಮೊಬೈಲ್ ಸಂಖ್ಯೆಯ ಮೂಲಕ ನೋಂದಣಿ ಮಾಡಿಕೊಳ್ಳುವಂತೆ ರಾಜ್ಯಗಳಿಗೆ ತಿಳಿಸಿದ್ದಾರೆ. ಲಸಿಕೆ ಪಡೆಯುವ ವ್ಯಕ್ತಿಗಳ ಗುರುತು ಹೊಂದುವುದು ಹಾಗೂ ಡಿಜಿಟಲ್ ದಾಖಲೆ ಹೊಂದುವುದು ಅಗತ್ಯವಾಗಿದೆ ಎಂದೂ ಶರ್ಮ ಹೇಳಿದ್ದಾರೆ.

## ಶೀಘ್ರ ಶುಭ ಸುದ್ದಿ: ಮುಖ್ಯಮಂತ್ರಿ

**(1ನೇ ಪುಟದಿಂದ)** ಕೇಂದ್ರಕ್ಕೆ ರವಾನಿಸಲಾಗುವುದು ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ. ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ಬಗ್ಗೆಯೂ ಚರ್ಚೆ ನಡೆದಿದ್ದು, ರಾಜ್ಯದಲ್ಲಿ ಪಕ್ಷ ಸಂಘಟನೆ ಕುರಿತಂತೆ ಸಲಹೆ, ಸೂಚನೆಗಳನ್ನು ನೀಡಲಾಗಿದೆ ಎಂದು ಯಡಿಯೂರಪ್ಪ ತಿಳಿಸಿದರು.

# ಗ್ರಾಮಗಳ ಅಭಿವೃದ್ಧಿಗಾಗಿ ಪಕ್ಷಾತೀತವಾಗಿ ಒಗ್ಗಟ್ಟಾಗಿರಬೇಕು

### ಭಾನುವಳ್ಳಿಯಲ್ಲಿ ದೊಡ್ಡ ಎಡೆಪೂಜೆ ಕಾರ್ಯಕ್ರಮದಲ್ಲಿ ನೂತನ ಗ್ರಾ.ಪಂ. ಸದಸ್ಯರಿಗೆ ಶಾಸಕ ರಾಮಪ್ಪ ಕಿವಿಮಾತು



ಮಲೇಬೆನ್ನೂರು, ಜ.10- ನೂತನವಾಗಿ ಗ್ರಾ.ಪಂ. ಸದಸ್ಯರಾಗಿ ಆಯ್ಕೆಯಾಗಿರುವವರು ಗ್ರಾಮದ ಅಭಿವೃದ್ಧಿಗಾಗಿ ಪಕ್ಷಾತೀತವಾಗಿ ಒಗ್ಗಟ್ಟಾ ಗಿರಿ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ಭಾನುವಳ್ಳಿ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ದೇವರುಗಳ, ಹಾಲುಮತ ಮಹಾಮಹಿಮರ ಕಾರ್ತಿಕೋತ್ಸವ ಹಾಗೂ ದೊಡ್ಡ ಎಡೆಪೂಜೆ ಅಂಗವಾಗಿ ನಿನ್ನೆ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ನೂತನ ಗ್ರಾ.ಪಂ. ಸದಸ್ಯರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಗ್ರಾಮದ ಅಭಿವೃದ್ಧಿ ದೃಷ್ಟಿಯಿಂದ ಸದಸ್ಯರು ಒಗ್ಗಟ್ಟಾಗಿದ್ದರೆ ನಾವೂ ಕೂಡಾ ನಿಮ್ಮ ಜೊತೆ ಕೈ ಜೋಡಿಸುತ್ತೇವೆ. ಚುನಾವಣೆ ಬಂದಾಗ ಮಾತ್ರ ಪಕ್ಷ ಮಾಡಿ, ನಂತರ ಎಲ್ಲರೂ ಸಾಮರಸ್ಯದಿಂದ ಜೀವನ ನಡೆಸಬೇಕೆಂದು ರಾಮಪ್ಪ ಕಿವಿಮಾತು ಹೇಳಿದರು.

ಭಾನುವಳ್ಳಿ ಗ್ರಾಮದಲ್ಲಿ ಕಳೆದ 30-40 ವರ್ಷಗಳಿಂದ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆ ಜಾತ್ರೆಯ ಅಂಗವಾಗಿ ಸಾಮೂಹಿಕ ವಿವಾಹ ಏರ್ಪಡಿಸುತ್ತಾ ಬಂದಿರುವುದು ಮಾದರಿ ಕೆಲಸವಾಗಿದೆ. ಜೊತೆಗೆ ಜನರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸಿರುವುದು ಶ್ಲಾಘನೀಯ ಎಂದು ರಾಮಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ವೇ. ನಾಗಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿ.ಪಂ. ಮಾಜಿ ಅಧ್ಯಕ್ಷ ಜಿ. ದ್ಯಾಮಣ್ಣ ಕಾರ್ಯಕ್ರಮ ಉದ್ಘಾಟಿಸಿದರು.

ಡಾ. ರಶ್ಮಿ ವೈ. ನಾಗಪ್ಪ, ಉದ್ಯಮಿ ಕುಂಬಳೂರು ವಿರೂಪಾಕ್ಷಪ್ಪ, ಗ್ರಾಮದ ನಿವೃತ್ತ ಅಧಿಕಾರಿಗಳಾದ ಕೆ. ಸಿದ್ದಪ್ಪ, ಜಿ. ಚಂದ್ರಪ್ಪ, ಹೆಚ್. ಪದ್ದಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ತಾ. ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಗ್ರಾಮದ ಕೆ. ಬೀರಪ್ಪ, ಪೂಜಾರ್ ಹಾಲಪ್ಪ, ಹೆಚ್.ಕೆ. ಕನ್ನಪ್ಪ, ಪಿಡಿಓ ನಾಗರಾಜ್ ಸಾರಥಿ ಪಿಎಸಿಎಸ್ ಅಥಣಿ ಸದಾನಂದಪ್ಪ, ಬೀರೇಶ್ವರ ಶಾಲೆ ಅಧ್ಯಕ್ಷ ಹೆಚ್.ಸಿ. ಬಸವನಗೌಡ ಮತ್ತಿತರರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ 13 ಜೋಡಿ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಗ್ರಾ.ಪಂ. ನೂತನ ಸದಸ್ಯರಾದ ಕೆ. ಚಂದ್ರಪ್ಪ, ಬಿ.ಎನ್. ಚಂದ್ರಪ್ಪ, ಪವಾಟಿ ಮಂಜಪ್ಪ, ಡಿ. ಮುಸ್ತಾಫ್, ಗಿರಿಜಮ್ಮ, ರೇಣುಕಮ್ಮ ಅವರನ್ನು ಸನ್ಮಾನಿಸಲಾಯಿತು.

ಹೆಚ್.ಎಸ್. ಕರಿಯಪ್ಪ ಸ್ವಾಗತಿಸಿದರು. ಯು.ಕೆ. ಅಣ್ಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಬಸವರಾಜ್ ನಿರೂಪಿಸಿದರೆ, ಮಹೇಂದ್ರ ವಂದಿಸಿದರು.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜ ನಾನಂದಪುರಿ ಸ್ವಾಮೀಜಿ, ರಟ್ಟಿಹಳ್ಳಿ ಸ್ವಾಮೀಜಿ ದೊಡ್ಡ ಎಡೆ ಪೂಜೆಯಲ್ಲಿ ಪಾಲ್ಗೊಂಡಿದ್ದರು.

## ಜಿಲ್ಲೆಯಲ್ಲಿ ಇಂದಿನಿಂದ 3 ದಿನ ಉಸ್ತುವಾರಿ ಸಚಿವರ ಪ್ರವಾಸ

ನಗರಾಭಿವೃದ್ದಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು - ನಾಳೆ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಇಂದು ಬೆಳಿಗ್ಗೆ 7 ರಿಂದ 9 ರವರೆಗೆ ದಾವಣಗೆರೆ ಮಹಾನಗರಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ, ನಗರಾಭಿವೃದ್ದಿ ಪ್ರಾಧಿಕಾರ ಮತ್ತು ಕ.ನ.ನೀ.ಸ ಮತ್ತು ಒ.ಚ ಮಂಡಳಿ ಮತ್ತು ಕೆಯುಐಡಿಎಫ್‌ಸಿ ವ್ಯಾಪ್ತಿಯ ಅಭಿವೃದ್ದಿ ಕಾಮಗಾರಿಗಳನ್ನು ವೀಕ್ಷಣೆ ಮಾಡುವರು. ಬೆಳಿಗ್ಗೆ 10.30 ರಿಂದ 11.30 ರವರೆಗೆ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಸ್ಮಾರ್ಟ್‌ಸಿಟಿಯ ಅಭಿವೃದ್ದಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30 ರವರೆಗೆ ಪಾಲಿಕೆ ಸಭಾಂಗಣದಲ್ಲಿ ಪಾಲಿಕೆಯ ಅಭಿವೃದ್ದಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12.30 ರಿಂದ ಮಧ್ಯಾಹ್ನ 1.30 ರವರೆಗೆ ಕೆಯುಐಡಿಎಫ್‌ಸಿ ಮತ್ತು ಕ.ನ.ನೀ.ಸ ಮತ್ತು ಒ.ಚ ಮಂಡಳಿ ಕಾಮಗಾರಿಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡು, ಮಧ್ಯಾಹ್ನ 3 ರಿಂದ ಸಂಜೆ 4.30 ರವರೆಗೆ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರೊಂದಿಗೆ ಸಭೆ ನಡೆಸುವರು.

ನಾಳೆ ದಿನಾಂಕ 12 ರ ಬೆಳಿಗ್ಗೆ ದಾವಣಗೆರೆಯಿಂದ ನಿರ್ಗಮಿಸಿ, 8.30 ಕ್ಕೆ ಹೊನ್ನಾಳಿ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 12 ರವರೆಗೆ ಹೊನ್ನಾಳಿಯಲ್ಲಿ ಆಯೋಜಿಸಲಾಗಿರುವ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 12 ಗಂಟೆಗೆ ಹೊನ್ನಾಳಿಯಿಂದ ನಿರ್ಗಮಿಸುವರು.

## ನಗರದಲ್ಲಿ ಇಂದಿನಿಂದ ಯೋಗಾಸನ ತರಬೇತಿ

ಆಚಾರ್ಯ ಯೋಗ ವಿದ್ಯಾಶಾಲೆ ವತಿಯಿಂದ ಉಚಿತ ಯೋಗಾಸನ ತರಬೇತಿ ಶಿಬಿರವು ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ನಡೆಯಲಿದೆ. ಯೋಗ ಶಿಕ್ಷಕ ಗೋಪಿನಾಥ್ ಅವರು ಶಿಬಿರವನ್ನು ನಡೆಸಿ ಕೊಡುವರು ಎಂದು ಪುಷ್ಪಾ (9036719573) ತಿಳಿಸಿದ್ದಾರೆ.

## ಆವರಗೊಳ್ಳ ಗ್ರಾ.ಪಂ ಸದಸ್ಯ ಜಿ.ಟಿ. ವೀರಣ್ಣ ಅವರಿಗೆ ಸನ್ಮಾನ



ದಾವಣಗೆರೆ, ಜ.10- ಆವರಗೊಳ್ಳ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ 3ನೇ ವಾರ್ಡ್‌ನಲ್ಲಿ ಅತೀ ಹೆಚ್ಚು ಮತಗಳನ್ನು ಪಡೆದು ಎರಡನೇ ಬಾರಿಗೆ ಆಯ್ಕೆಯಾಗಿರುವ ಜಿ.ಟಿ.ವೀರಣ್ಣ ಅವರನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಸಮಾಜ ಸೇವಕ ಕೆ.ಎಂ.ವೀರಯ್ಯ ಸ್ವಾಮಿ ಉಪಸ್ಥಿತರಿದ್ದರು. ವೀರಣ್ಣ ಅವರು ತಮ್ಮ ಮದುವೆ ದಿನದ ಮುಹೂರ್ತದ ಸಂದರ್ಭದಲ್ಲೇ ಗ್ರಾ.ಪಂ. ಸದಸ್ಯರಾಗಿ ಆಯ್ಕೆ ಘೋಷಣೆಯಾಗಿದ್ದು ವಿಶೇಷ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹಗೇದಿಬ್ಬ ಸರ್ಕಲ್, ಗಾಂಧಿನಗರ, ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ರೈತರಿಗೆ 1,364 ಕೋಟಿ ಪಾವತಿ

**(1ನೇ ಪುಟದಿಂದ)** 6,000 ರೂ.ಗಳನ್ನು ಮೂರು ಸಮಾನ ಕಂತುಗಳಲ್ಲಿ ನೀಡಲಾಗುತ್ತದೆ. 2 ಹೆಕ್ಟೇರ್‌ಗೂ ಕಡಿಮೆ ಜಮೀನಿನ ಮಾಲೀಕತ್ವ ಹೊಂದಿರುವ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಈ ಹಣ ನೀಡಲಾಗುತ್ತದೆ.

ಅನರ್ಹರು ಹಾಗೂ ಆದಾಯ ತೆರಿಗೆ ಪಾವತಿಸುವ ರೈತರೂ ಸಹ ಈ ನೆರವನ್ನು ಪಡೆದಿದ್ದಾರೆ. ಇವರು ನೆರವಿಗೆ ಅನರ್ಹರು ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ. ಮಾಹಿತಿ ಹಕ್ಕಿಗೆ ಅರ್ಜಿ ಸಲ್ಲಿಸಿದ್ದ ವೆಂಕಟೇಶ್ ನಾಯಕ್ ಅವರಿಗೆ ನೀಡಿದ ಮಾಹಿತಿಯ ಪ್ರಕಾರ, ಅನರ್ಹರಲ್ಲಿ ಆದಾಯ ತೆರಿಗೆ ಪಾವತಿಸುವವರ ಪಾಲು ಶೇ.55.58ರಷ್ಟಿದೆ.

ಪಂಜಾಬ್, ಅಸ್ಸಾಂ, ಮಹಾರಾಷ್ಟ್ರ, ಗುಜರಾತ್ ಹಾಗೂ ಉತ್ತರ ಪ್ರದೇಶಗಳಲ್ಲಿ ಅನರ್ಹ ರೈತರು ಹೆಚ್ಚಾಗಿ ಹಣ ಪಡೆದಿದ್ದಾರೆ.

ಪಂಜಾಬ್‌ನ 4.74 ಲಕ್ಷ ಅನರ್ಹರು ಹಣ ಪಡೆದಿದ್ದಾರೆ. ಅಸ್ಸಾಂನಲ್ಲಿ 3.45 ಲಕ್ಷ, ಮಹಾರಾಷ್ಟ್ರದ 2.86 ಲಕ್ಷ ಹಾಗೂ ಗುಜರಾತ್‌ನ 1.64 ಲಕ್ಷ ಜನರು ಅನರ್ಹರಾಗಿದ್ದರೂ ಹಣ ಪಡೆದಿದ್ದಾರೆ.

## ವಿದೇಶಿ ಕಪ್ಪು ಹಣದ ತನಿಖೆಗೆ ಘಟಕ

ನವದೆಹಲಿ, ಜ. 10 - ಭಾರತೀಯರು ವಿದೇಶದಲ್ಲಿ ಹೊಂದಿರುವ ಅಕ್ರಮ ಆಸ್ತಿ ಹಾಗೂ ಕಪ್ಪು ಹಣದ ಕುರಿತು ತನಿಖೆ ನಡೆಸಲು ಆದಾಯ ತೆರಿಗೆ ಇಲಾಖೆಯ ವಿಶೇಷ ಘಟಕವನ್ನು ಸ್ಥಾಪಿಸಲಾಗಿದೆ.

ವಿದೇಶಿ ಆಸ್ತಿಗಳ ತನಿಖಾ ಘಟಕ (ಎಫ್.ಎ.ಐ.ಯು.) ಅನ್ನು ಇತ್ತೀಚೆಗೆ ರಚಿಸಲಾಗಿದೆ. ದೇಶದ ಎಲ್ಲಾ 14 ತನಿಖಾ ನಿರ್ದೇಶನಾಲಯಗಳಲ್ಲಿ ಈ ಘಟಕ ಕಾರ್ಯ ನಿರ್ವಹಿಸಲಿದೆ.


**ಚಿರಸ್ಮರಣೆ**



ತಾವು ನಮ್ಮನ್ನಗಲಿ ಇಂದಿಗೆ 27 ವರ್ಷಗಳಾದವು. ತಾವು ಹಾಕಿ ಕೊಟ್ಟ ಸನ್ಮಾರ್ಗ, ಸನ್ನಡತೆ ಹಾಗೂ ಸದಾ ತಮ್ಮ ನೆನಪಿನಲ್ಲಿರುವ:

ಶ್ರೀಮತಿ ಕಲ್ಲಮ್ಮನವರು
ನಿಧನ: 11-01-1994

ತಮ್ಮ ಪತಿ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.



## 14 ರಂದು ಹರಿಹರಕ್ಕೆ ವಸತಿ ಸಚಿವ ಸೋಮಣ್ಣ

ದಾವಣಗೆರೆ, ಜ.10- ವಸತಿ ಖಾತೆ ಸಚಿವ ವಿ.ಸೋಮಣ್ಣ ಇದೇ ದಿನಾಂಕ 14 ರಂದು ಹರಿಹರ ತಾಲ್ಲೂಕಿಗೆ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ಬೆಳಿಗ್ಗೆ 10.30 ಕ್ಕೆ ಹರಿಹರಕ್ಕೆ ಆಗಮಿಸಿ ಸಾರ್ವಜನಿರ ಭೇಟಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವರು. ನಂತರ ಬಿಜೆಪಿ ತಾಲ್ಲೂಕು ಕಚೇರಿಗೆ ಭೇಟಿ ನೀಡುವರು. ಬೆಳಿಗ್ಗೆ 11.30 ಕ್ಕೆ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ ಸುಕ್ಷೇತ್ರ, ಹರಿಹರದಲ್ಲಿ ಆಯೋಜಿಸಲಾಗಿರುವ 'ಹರ ಜಾತ್ರಾ ಮಹೋತ್ಸವ-2021' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12.30 ಕ್ಕೆ ಹರಿಹರದಿಂದ ನಿರ್ಗಮಿಸುವರು ಎಂದು ಸಚಿವರ ವಿಶೇಷ ಕರ್ತವ್ಯಾಧಿಕಾರಿ ಟಿ.ಎನ್.ರವಿಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಬಿಜೆಪಿಯಿಂದ ಜನಸೇವಕ ಸಮಾವೇಶ

ಜಿಲ್ಲಾ ಬಿಜೆಪಿ ವತಿಯಿಂದ ಗ್ರಾಮ ಪಂಚಾಯತಿಗಳ ನೂತನ ಸದಸ್ಯರುಗಳ ಜನಸೇವಕ ಕಾರ್ಯಕ್ರಮವನ್ನು ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ ಇಂದು ಮಧ್ಯಾಹ್ನ 2.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಉಪ ಮುಖ್ಯಮಂತ್ರಿಗಳು, ಸಚಿವರು, ಲೋಕಸಭಾ ಸದಸ್ಯರುಗಳು ರಾಜ್ಯದ ಪದಾಧಿಕಾರಿಗಳು ಆಗಮಿಸಲಿದ್ದಾರೆ.


**ಶ್ರೀಮತಿ ನಿರ್ಮಲಮ್ಮ ನಿಧನ**



ದಾವಣಗೆರೆ ಎಂ.ಸಿ.ಸಿ 'ಎ' ಬ್ಲಾಕ್ 3ನೇ ಮೇನ್, 3ನೇ ಕ್ರಾಸ್ (#2591/1A) ವಾಸಿ ಜಿ.ಟಿ. ತಿಮ್ಮಣ್ಣ ಇವರ ಧರ್ಮಪತ್ನಿ ಹಾಗೂ ಶ್ರೀ ಲಕ್ಷ್ಮಿ ನಾರಾಯಣ ಭೋವಿ ವಿದ್ಯಾಸಂಸ್ಥೆ ಅಧ್ಯಕ್ಷರಾಗಿದ್ದ

**ಶ್ರೀಮತಿ ನಿರ್ಮಲಮ್ಮ** (58)

ಅವರು ದಿನಾಂಕ 10.01.2021 ರಂದು ಭಾನುವಾರ ಸಂಜೆ 6 ಗಂಟೆಗೆ ನಿಧನರಾಗಿದ್ದಾರೆ. ಪತಿ, ಮೂವರು ಪುತ್ರಿಯರು, ಓರ್ವ ಪುತ್ರ, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.01.2021 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಗೊಲ್ಲರಹಳ್ಳಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ

**88924 86388, 99003 52564**



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 10.01.2021 ರಂದು ನಿಧನರಾದ ಶ್ರೀ ಲಕ್ಷ್ಮಿ ನಾರಾಯಣ ಭೋವಿ ವಿದ್ಯಾಸಂಸ್ಥೆ (ರಿ) ಗೊಲ್ಲರಹಳ್ಳಿ ಅಧ್ಯಕ್ಷರಾಗಿದ್ದ ಹಾಗೂ ಜಿ.ಟಿ. ತಿಮ್ಮಣ್ಣ ಇವರ ಧರ್ಮಪತ್ನಿ

**ಶ್ರೀಮತಿ ನಿರ್ಮಲಮ್ಮ**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.


ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು

**ಶ್ರೀ ಆಂಜನೇಯ ಪ್ರೌಢಶಾಲೆ**

ಯರಗುಂಟೆ ಹೊಸ ಬಡಾವಣೆ, ಕೊಂಡಜ್ಜಿ ರಸ್ತೆ, ದಾವಣಗೆರೆ.



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 8.1.2021ರಂದು ನಿಧನರಾದ ದಾವಣಗೆರೆ ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾಗಿದ್ದ

**ಶ್ರೀ ವಿಶ್ರಾಮ್ ಪಿ. ರಾಯ್ಕರ್**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿ (ರಿ) ದಾವಣಗೆರೆ.**

# ಮಳೆ ಹಾನಿ ಶೀಘ್ರವೇ ಪರಿಹಾರ : ಬಿ.ಸಿ.ಪಾಟೀಲ್

ರಾಣೇಬೆನ್ನೂರು, ಜ.10 - ಅಕಾಲಿಕ ಮಳೆಯಿಂದ ಹಾನಿಗೊಳಗಾದ ರೈತರಿಗೆ ಸರ್ಕಾರ ಶೀಘ್ರದಲ್ಲೇ ಪರಿಹಾರ ನೀಡಲಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ರಾಣೇಬೆನ್ನೂರಿನಲ್ಲಿ ಕೃಷಿ ಉಪನಿರ್ದೇಶಕರ ಕಛೇರಿಯ ನೂತನ ಕಟ್ಟಡಕ್ಕೆ ಶಿಲಾನ್ಯಾಸ ಹಾಗೂ ರೈತ ಸಂಜೀವಿನಿ ವಾಹನ ಲೋಕಾರ್ಪಣೆ ಮಾಡಿ ಮಾತನಾಡಿದರು.

ಚಂಡಮಾರುತದಿಂದಾಗಿ ಮಳೆಯಾಗಿ ಹೊಲದಲ್ಲಿದ್ದ ಫಸಲು ಹಾಳಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿ ರೈತ ಚಿಂತೆಗೀಡಾದ ಪರಿಸ್ಥಿತಿ ಎದುರಾಗಿದೆ. ರೈತರು ಈ ಬಗ್ಗೆ ಎದೆಗುಂದದಿರಿ ಆತ್ಮಹತ್ಯೆಯಂತಹ ಕೃತ್ಯಗಳಿಗೆ ಬಲಿಯಾಗಬೇಡಿ. ಸರ್ಕಾರ ನಿಮ್ಮ ಜೊತೆಗಿದೆ ಎಂದು ಸಚಿವ ಪಾಟೀಲ ಹೇಳಿದರು.

ಕೋವಿಡ್‌ನಿಂದಾಗಿ ಸರ್ಕಾರ ಆರ್ಥಿಕ ಸಂಕಷ್ಟದಲ್ಲಿದ್ದರೂ ಸಹ, ಮುಖ್ಯಮಂತ್ರಿಗಳು ಅಭಿವೃದ್ಧಿ ಕಾಮಗಾರಿಗಳಿಗೆ ಹಿಂದೇಟು ಹಾಕುತ್ತಿಲ್ಲ. ಸ್ವಾಭಿಮಾನಿ ರೈತರನ್ನಾಗಿಸಲು 40 ರೈತ ಸಂಜೀವಿನಿ ವಾಹನಗಳು, ಗುರುತಿನ ಚೀಟಿ ಮುಂತಾದ ಕಾರ್ಯಕ್ರಮಗಳೊಂದಿಗೆ ರೈತರನ್ನು ಸ್ವಾವಲಂಬಿಗಳನ್ನಾಗಿಸುವ ಪ್ರಯತ್ನವನ್ನು ಸರ್ಕಾರ ನಡೆಸಿದೆ ಎಂದು ಸಚಿವರು ಹೇಳಿದರು.



**ರಾಣೇಬೆನ್ನೂರಿನಲ್ಲಿ ಕೃಷಿ ಉಪನಿರ್ದೇಶಕರ ಕಛೇರಿಯ ನೂತನ ಕಟ್ಟಡಕ್ಕೆ ಶಿಲಾನ್ಯಾಸ ಹಾಗೂ ರೈತ ಸಂಜೀವಿನಿ ವಾಹನ ಲೋಕಾರ್ಪಣೆ**

ರಾಜ್ಯದಲ್ಲಿ ಹರಪನಹಳ್ಳಿ, ಚಳ್ಳಕೆರೆಯಲ್ಲಿ ಮಾತ್ರ ಉಪನಿರ್ದೇಶಕರ ಕಛೇರಿ ಕಟ್ಟಡಗಳಿದ್ದು, ಇಲ್ಲಿ ಕಟ್ಟಲಾಗುತ್ತಿರುವುದು 3ನೇಯ ಕಟ್ಟಡ. ಸಚಿವರ ರೈತಪರ ಕಾಳಜಿಯಿಂದಾಗಿ ಇದಕ್ಕೆ ಒಂದು ಕೋಟಿ ಹಣ ಒದಗಿಸಿದ್ದು, ಶೀಘ್ರವಾಗಿ ನಿರ್ಮಾಣವಾಗಲಿದೆ ಎಂದು ಇಲಾಖೆಯ ಉಪನಿರ್ದೇಶಕರಾದ ಸ್ಫೂರ್ತಿ ಸ್ವಾಗತ ಭಾಷಣದಲ್ಲಿ ವಿವರಿಸಿದರು.

ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಏಕನಾಥ ಭಾನುವಳ್ಳಿ ಶಾಸಕರಾದ ಅರುಣಕುಮಾರ ಪೂಜಾರ, ವಿರುಪಾಕ್ಷಪ್ಪ ಬಳ್ಳಾರಿ, ಜಿ.ಪಂ ಸದಸ್ಯ ಶಿವಾನಂದ ಕನ್ನಪ್ಪಳವರ, ಗದಿಗೆವ್ವ ದೇಸಾಯಿ, ತಾ.ಪಂ ಅಧ್ಯಕ್ಷೆ ಗೀತಾ ಲಮಾಣಿ, ಉಪಾಧ್ಯಕ್ಷೆ ಕಸ್ತೂರಿ ಹೊನ್ನಾಳಿ, ಎ ಡಿ ಗೌಡಪ್ಪಳವರ, ಎಸ್. ಎಸ್. ರಾಮಲಿಂಗಣ್ಣನವರ ಹಾಗೂ ಇತರೆ ಅಧಿಕಾರಿಗಳು ಇದ್ದರು.

# ಬದುಕಿನಲ್ಲಿ ಹೊಂದಾಣಿಕೆ, ಸಾಮರಸ್ಯ ಬೇಕು

## ಮುರುಘಾ ಮಠದಲ್ಲಿನ 31ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಶರಣರು

ಚಿತ್ರದುರ್ಗ, ಜ. 10- ಉಸಿರಾಟ ಜೀವಂತಿಕೆಯನ್ನು ತೋರಿಸುತ್ತದೆ. ಮಾನವ ಉಸಿರಾಟದ ಪ್ರಕ್ರಿಯೆಯಂತೆ ಧರ್ಮ, ಮೌಲ್ಯ, ಸಿದ್ಧಾಂತಗಳನ್ನು ಸದಾ ತನ್ನೊಳಗಿರಿಸಿಕೊಳ್ಳಬೇಕು. ಅಂಥ ವ್ಯಕ್ತಿ ನಡೆದಾಡುವ ದೇವಾಲಯವಾಗುತ್ತಾನೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಿಸಿದರು.

ಇಲ್ಲಿನ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಸಹಯೋಗದಲ್ಲಿ ಮೊನ್ನೆ ನಡೆದ ಮೂವತ್ತೊಂದನೇ ವರ್ಷದ ಒಂದನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂತಃಸಾಕ್ಷಿ ಮತ್ತು ಅಂತಃಪ್ರಜ್ಞೆ ಜೊತೆಯಲ್ಲಿ ಸಾಗಬೇಕು. ಬದುಕಿನಲ್ಲಿ ಹೊಂದಾಣಿಕೆ ಮತ್ತು ಸಾಮರಸ್ಯ ಬೇಕು. ಸಂಸಾರದಲ್ಲಿ ಸ್ವಾರಸ್ಯ ಉಂಟಾಗಬೇಕು. ದೇಹದಲ್ಲಿ ರಕ್ತ ಹರಿಯಲೇಬೇಕು. ರಕ್ತದಾನ ಶ್ರೇಷ್ಠವಾದುದು. ಎಲ್ಲರು ರಕ್ತದಾನ ಮಾಡಿ, ಇನ್ನೊಬ್ಬರ ಜೀವ ಉಳಿಸಬೇಕು ಎಂದರು.

ಹೃಷಿಕೇಶದ ದಯಾನಂದಾಶ್ರಮದ ಶ್ರೀ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮೀಜಿ ಮಾತನಾಡಿ, ನಮ್ಮ ಸಿದ್ಧಾಂತವನ್ನು ನಾವು ಆಚರಿಸಬೇಕು. ಮಾತನಾಡುವುದು ಸುಲಭ, ಆದರೆ ಆಚರಣೆಗೆ ತರುವುದು ಕಷ್ಟ. ಮದುವೆ ಅಂದರೆ ಪರಸ್ಪರ ಅರ್ಥ ಮಾಡಿಕೊಳ್ಳುವುದಾಗಿದೆ ಎಂದು ತಿಳಿಸಿದರು.



ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಿ.ಎಸ್. ಅರುಣ್ ಮಾತನಾಡಿ, ಶ್ರೀಮಠದಲ್ಲಿ ಸರಳ ವಿವಾಹವಾದವರು ಗಟ್ಟಿ ಬದುಕನ್ನು ಕಟ್ಟಿಕೊಳ್ಳಬೇಕು. ಭಾರತ ಇನ್ನು ಮುಂದೆ ವಿಶ್ವಗುರು ಮಟ್ಟಕ್ಕೆ ಹೋಗುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್. ರಘು, ವಿ. ಸತೀಶ್ ಮಾತನಾಡಿದರು. ಈ ಸಂದರ್ಭದಲ್ಲಿ 2 ಜೋಡಿ ಅಂತರ್ಜಾತಿ ಸೇರಿದಂತೆ 17 ಜೋಡಿಗಳು ವಿವಾಹವಾದರು.

ಛಲವಾದಿ ಗುರುಪೀಠದ ಶ್ರೀ ಬಸವ ನಾಗಿದೇವ ಸ್ವಾಮೀಜಿ, ನಿಪ್ಪಾಣಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಮಡಿವಾಳ ಮಾಚಿದೇವ ಗುರುಪೀಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ ಉಪಸ್ಥಿತರಿದ್ದರು.

# ಸಾಧನೆಯಿಂದ ಶ್ರೇಯಸ್ಸು ಪ್ರಾಪ್ತಿ: ರಂಭಾಪುರಿ ಜಗದ್ಗುರು

## ಕೊಲನುಪಾಕ ಶ್ರೀ ಸ್ವಯಂಭು ಸೋಮೇಶ್ವರ ಕ್ಷೇತ್ರದಲ್ಲಿ ರಂಭಾಪುರಿ ಜಗದ್ಗುರುಗಳ 65ನೇ ಜನ್ಮದಿನೋತ್ಸವ ಕಾರ್ಯಕ್ರಮ

ಕೊಲನುಪಾಕ (ತೆಲಂಗಾಣ ರಾಜ್ಯ), ಜ. 10 - ಕಷ್ಟದ ಜೀವನ ಶಿಸ್ತನ್ನು ಕಲಿಸುವ ಪಾಠಶಾಲೆ. ನಿರಂತರ ಪ್ರಯತ್ನ ಮತ್ತು ಸಾಧನೆಯಿಂದ ಉನ್ನತಿ ಪಡೆಯಲು ಸಾಧ್ಯ. ಕ್ರಿಯಾಶೀಲ ಬದುಕು ಉಜ್ವಲ ಬಾಳಿಗೆ ಭದ್ರ ಬುನಾದಿ. ಸಾಧನೆಯಿಂದ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ ಎಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಡಾ. ಶ್ರೀ ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಕೊಲನುಪಾಕ ಶ್ರೀ ಸ್ವಯಂಭು ಸೋಮೇಶ್ವರ ಕ್ಷೇತ್ರದಲ್ಲಿ ತಮ್ಮ 65ನೇ ಜನ್ಮ ದಿನೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ವ್ಯಕ್ತಿತ್ವದ ಉನ್ನತೀಕರಣ ಮತ್ತು ವೈಯಕ್ತಿಕ ಸಾಧನೆಗಾಗಿ ಶ್ರಮಿಸಿದರೆ ಲೋಕೋದ್ಧಾರ ತಾನಾಗಿಯೇ ಆಗುತ್ತದೆ. ಸಾಗುವ ದಾರಿ ಕಠಿಣವಿದ್ದಷ್ಟೂ ಯಶಸ್ಸಿನ ಎತ್ತರ ಹೆಚ್ಚಾಗಿರುತ್ತದೆ. ಹಣ ಹೆಸರುಗಳಿಗಾಗಿ ಗುದ್ದಾಡುವ ಬದಲು ಮಾಡುವ ಕೆಲಸವನ್ನು ಶ್ರದ್ಧೆ, ಪ್ರಾಮಾಣಿಕತೆಗಳಿಂದ ಮಾಡಿದರೆ ಅದು ತಾನಾಗಿಯೇ ಲಭಿಸುತ್ತದೆ. ಅನುಭವ ಜೀವನದ ಅತ್ಯುತ್ತಮ ಗುರು. ಕೆಟ್ಟ ಅನುಭವಗಳು ಜೀವನದಲ್ಲಿ ಶ್ರೇಷ್ಠ ಪಾಠಗಳನ್ನು ಕಲಿಸುತ್ತವೆ. ಮನುಷ್ಯ ಎಷ್ಟೇ ದೊಡ್ಡ ಸ್ಥಾನಕ್ಕೇರಲಿ ಅವನು ತನ್ನ ಹಿಂದಿನ ಸ್ಥಿತಿಯನ್ನು ಸದಾಕಾಲ ನೆನಪಿಟ್ಟುಕೊಂಡಿರಬೇಕು. ಮಾತು ಕೃತಿ ಚಿಂತನೆಗಳು ಬದುಕಿನ ಮೇಲೆ ಅಗಾಧ ಪರಿಣಾಮ ಬೀರುತ್ತವೆ. ಕಲ್ಲು ಹೃದಯದವರನ್ನು ಬದಲಿಸಬಹುದು. ಆದರೆ ಕೊಳಕು ಮನಸ್ಸು ಇರುವವರನ್ನು ಬದಲಿಸಲು ಸಾಧ್ಯವಿಲ್ಲ. ಜ್ಞಾನ ಶಕ್ತಿಯನ್ನು ನೀಡಿದರೆ, ನಡತೆ ಗೌರವವನ್ನು ತಂದು ಕೊಡುತ್ತದೆ ಎಂದು ಜಗದ್ಗುರುಗಳು ಹೇಳಿದರು.



ತಾವು 64 ಸಂವತ್ಸರಗಳನ್ನು ಕಳೆದು 65ನೇ ಸಂವತ್ಸರದಲ್ಲಿ ಪಾದಾರ್ಪಣೆ ಮಾಡಿದ್ದೇವೆ. ದೇಹದಲ್ಲಿ ಶಕ್ತಿ ಇರುವ ತನಕ ಶ್ರಮಿಸಬೇಕೆಂಬ ಗುರಿ ನಮ್ಮದಾಗಿದೆ. 29 ವರುಷದ ಅವಧಿಯಲ್ಲಿ ಮಾಡಿದ ಸಾಧನೆಗೆ ನಡೆದ ಕೆಲಸ ಕಾರ್ಯಗಳೇ ಸಾಕ್ಷಿಯಾಗಿವೆ. ಇವುಗಳಿಗೆಲ್ಲ ಪೂರ್ವಾಚಾರ್ಯರ ಆಶೀರ್ವಾದ ಮತ್ತು ಭಕ್ತ ಗಣದ ಸಹಕಾರ ಕಾರಣವಾಗಿವೆ ಎಂದರೆ ತಪ್ಪಾಗದು. ಭವಿಷ್ಯತ್ತಿನ ಬದುಕಿನಲ್ಲಿ ಸತ್ಯ ಸಂಕಲ್ಪಗಳು ಸಾಕಾರಗೊಳ್ಳಬೇಕೆಂಬ ಮಹತ್ವಾಕಾಂಕ್ಷೆ ನಮ್ಮದಾಗಿದೆ ಎಂದು ಜಗದ್ಗುರುಗಳು ಆಶಯ ವ್ಯಕ್ತಪಡಿಸಿದರು.

ಕೊಲ್ಲಿಪಾಕಿ ಕ್ಷೇತ್ರಾಭಿವೃದ್ಧಿ ಟ್ರಸ್ಟಿನ ಕಾರ್ಯಾಧ್ಯಕ್ಷ ಬಿಚಗುಂದದ ಶ್ರೀ ಸೋಮಲಿಂಗ ಶಿವಾಚಾರ್ಯರು ಮತ್ತು ಉಪಾಧ್ಯಕ್ಷ ಮೇಹಕರ ಹಿರೇಮಠದ ಶ್ರೀ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತವನ್ನಿತ್ತರು.

ಹಿರೇನಾಗಾಂವ, ರಾಜೇಶ್ವರ, ದೇವಾಪುರ, ಗಡಿಗೌಡಗಾಂವ, ಅಷ್ಟಗಿ, ಹಳ್ಳಿಖೇಡ, ದೊಡ್ಡಸಗರ, ತೊನಸನಹಳ್ಳಿ, ದೋರನಹಳ್ಳಿ ಶ್ರೀಗಳವರು ಸೇರಿದಂತೆ 25ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಂಡಿದ್ದರು.

ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯರು ಸಮಾರಂಭದ ನೇತೃತ್ವ ವಹಿಸಿ ನಿರೂಪಿಸಿದರು. ಹೈದರಾಬಾದ್ ವೀರಶೈವ ಸಮಾಜದ ಅಧ್ಯಕ್ಷ ಎಂ. ವೀರಮಲ್ಲೇಶ, ಟ್ರಸ್ಟಿನ ಕಾರ್ಯದರ್ಶಿ ಅಣ್ಣಾರಾವ್ ಬಿರಾದಾರ, ಸದಸ್ಯರಾದ ಶಿವಶರಣಪ್ಪ ಸೀರಿ, ಬಾಬುರಾವ್ ಬಿರಾದಾರ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು.

ನಾಡಿನ ನಾನಾ ಭಾಗಗಳಿಂದ ಆಗಮಿಸಿದ ಸದ್ಭಕ್ತರು ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಜನ್ಮ ದಿನೋತ್ಸವ ನಿಮಿತ್ಯ ಗೌರವ ಸಮರ್ಪಿಸಿದರು. ಕಲಬುರ್ಗಿಯ ಗಿರಿಯಪ್ಪ ಮುತ್ಯಾ ಅವರು ಅನ್ನ ದಾಸೋಹ ಸೇವೆ ಸಲ್ಲಿಸಿದರು.


# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

**ಫೋನ್: 08192 - 223913, 233632 e-mail: rodvg@kgbk.in**

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 21-01-2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 21-01-2021 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.


**ಶಾಖೆ: ಕಕ್ಕರಗೊಳ್ಳ, ದಾವಣಗೆರೆ ತಾಲ್ಲೂಕು, ಫೋನ್ : 08192-279111 ಮೊ: 9986514939**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಸೊಪ್ಪಿನ ರಾಮಪ್ಪ ಬಿನ್. ಬಸಪ್ಪ, ಎಂ.ಜಿ. ಹಳ್ಳಿ | 67815301040914 | 1,50,551-00 |
| 2 | ಶ್ರೀ ಕೆ. ಧನುಕುಮಾರ್ ಬಿನ್. ಕೃಷ್ಣಾನಾಯ್ಕ, ಓಬಜ್ಜಿಹಳ್ಳಿ | 67815301049417 | 20,840-00 |
| 3 | ಶ್ರೀ ಬಸವರಾಜ ಎಂ. ಬಿನ್. ಮಾಯಪ್ಪ, ಕಕ್ಕರಗೊಳ್ಳ | 67815301055417 | 33,180-00 |
| 4 | ಶ್ರೀ ನಾಗೇಂದ್ರಪ್ಪ ಬಿನ್. ಹನುಮಂತಪ್ಪ, ಆವರಗೊಳ್ಳ | 67815301108217 | 63,981-00 |
| 5 | ಶ್ರೀ ರೇವಣಪ್ಪ ಐ. ಬಿನ್. ಕೊಟ್ರಪ್ಪ, ಕಕ್ಕರಗೊಳ್ಳ | 67815301008318 | 59,656-00 |
| 6 | ಶ್ರೀ ತಿಪ್ಪೇಶ್ ಈ. ಬಿನ್. ಜಯಪ್ಪ, ಕಕ್ಕರಗೊಳ್ಳ | 67815301018718 | 65,562-00 |
| 7 | ಶ್ರೀ ಕೃಷ್ಣಾನಾಯ್ಕ ಬಿನ್. ಧರ್ಮಾನಾಯ್ಕ, ಅರಸಾಪುರ | 67815301078918 | 62,482-00 |
| 8 | ಶ್ರೀಮತಿ ಪಕ್ಕೀರಿಬಾಯಿ ಕೋಂ.ಅಮ್ರಾನಾಯ್ಕ, ಚಿಕ್ಕಓಬಜ್ಜಿಹಳ್ಳಿ | 67815301102218 | 58,935-00 |
| 9 | ಶ್ರೀಮತಿ ಸರೋಜಮ್ಮ ಕೋಂ. ರುದ್ರಪ್ಪ, ಆವರಗೊಳ್ಳ | 67815301128518 | 35,718-00 |
| 10 | ಶ್ರೀ ಗುರುಬಸವರಾಜೇಂದ್ರಸ್ವಾಮಿ ಬಿನ್. ಕರಿಬಸವಯ್ಯ, ಆವರಗೊಳ್ಳ | 67815301129818 | 9,511-00 |
| 11 | ಶ್ರೀ ಗುರುಬಸವರಾಜೇಂದ್ರಸ್ವಾಮಿ ಬಿನ್. ಕರಿಬಸವಯ್ಯ, ಆವರಗೊಳ್ಳ | 67815301129918 | 29,828-00 |
| 12 | ಶ್ರೀ ಬೀರಾನಾಯ್ಕ ಬಿನ್. ತೋಟ್ಯಾನಾಯ್ಕ, ಚಿಕ್ಕಓಬಜ್ಜಿಹಳ್ಳಿ | 67815301132818 | 20,159-00 |
| 13 | ಶ್ರೀ ದುಗ್ಗೇಶಿ ಪಿ. ಬಿನ್. ಪ್ರಕಾಶ್, ಕಕ್ಕರಗೊಳ್ಳ | 67815301003419 | 36,100-00 |
| 14 | ಶ್ರೀ ಗಣೇಶ್ ಬಿನ್. ರುದ್ರಪ್ಪ, ಆವರಗೊಳ್ಳ | 67815301012219 | 58,661-00 |
| 15 | ಶ್ರೀಮತಿ ಸುಮಿತ್ರ ಕೋಂ. ರಾಜಪ್ಪ, ಮಾಳಗೊಂಡನಹಳ್ಳಿ | 67815301012819 | 47,869-00 |
| 16 | ಶ್ರೀಮತಿ ರೇಖಾ ಎಂ. ಬಿನ್. ಮಂಜಪ್ಪ, ಯರಗುಂಟೆ | 67815301015519 | 52,597-00 |
| 17 | ಶ್ರೀ ವೀರೇಶಿ ಬಿನ್. ಕರೆಗೌಡಪ್ಪ ಕೋಡಿಹಳ್ಳಿ, ಕೋಡಿಹಳ್ಳಿ | 67815301015719 | 49,099-00 |
| 18 | ಶ್ರೀ ಬಿ.ಸುರೇಶ್ ಬಿನ್. ಬಸಪ್ಪ, ಮಾಳಗೊಂಡನಹಳ್ಳಿ | 67815301015819 | 44,427-00 |
| 19 | ಶ್ರೀ ಮಂಜ್ಯಾನಾಯ್ಕ ಬಿನ್. ದೇವಲಾನಾಯ್ಕ, ಬಡಿಯಾನಾಯ್ಕನತಾಂಡ | 67815301021019 | 34,895-00 |
| 20 | ಶ್ರೀ ಜಯಪ್ಪ ಕೆ. ಬಿನ್. ಬಸಪ್ಪ, ಕಕ್ಕರಗೊಳ್ಳ | 67815302028115 | 54,487-00 |
| 21 | ಶ್ರೀ ಬಸವಂತ್ ಬಸಂತ್ ಬಿನ್. ನಿಂಗೋಜಿರಾವ್, ಕಕ್ಕರಗೊಳ್ಳ | 67815302089716 | 40,659-00 |
| 22 | ಶ್ರೀ ಯೋಗೇಶ್ ಕೆ.ಎನ್. ಬಿನ್. ನಂಜಪ್ಪ ಕೆ. ಆವರಗೊಳ್ಳ | 67815302094416 | 1,58,976-00 |
| 23 | ಶ್ರೀ ಧನಂಜಯ ಹೆಚ್.ಎಸ್. ಬಿನ್. ಶಿವಪ್ಪ ಹೆಚ್. ಕಕ್ಕರಗೊಳ್ಳ | 67815302005117 | 4,00,408-00 |
| 24 | ಶ್ರೀ ಕೆ.ಎಸ್. ಮಂಜುನಾಥ ಬಿನ್. ಕೆ.ಎನ್. ಶಂಭುಲಿಂಗಪ್ಪ, ಕಕ್ಕರಗೊಳ್ಳ | 67815302058717 | 1,20,728-00 |
| 25 | ಶ್ರೀಮತಿ ಮಂಜಮ್ಮ ಕೋಂ. ಶೇಖರಪ್ಪ, ಆವರಗೊಳ್ಳ | 67815302061117 | 49,807-00 |
| 26 | ಶ್ರೀಮತಿ ಶೀಲಾ ಕೋಂ. ವೀರಪ್ಪ ವೈ. ಕಕ್ಕರಗೊಳ್ಳ | 67815302080517 | 2,81,903-00 |
| 27 | ಶ್ರೀ ಎ.ಎನ್. ಮಾಧ್ವಪ್ರಸಾದ್, ನಂ.31, ರಾಧೇಶ ನಿಲಯ, 2ನೇ ಕ್ರಾಸ್, ದೇವರಾಜ ಅರಸ್ ಬಡಾವಣೆ, ಬಿ ಬ್ಲಾಕ್, ದಾವಣಗೆರೆ. | 67815302108117 | 1,26,054-00 |
| 28 | ಶ್ರೀ ನಾಗೇಂದ್ರಪ್ಪ ಬಿನ್. ಹನುಮಂತಪ್ಪ, ಆವರಗೊಳ್ಳ | 67815302108517 | 51,095-00 |
| 29 | ಶೃತಿ ಬಿನ್. ಪ್ರಕಾಶ್, ಕಕ್ಕರಗೊಳ್ಳ | 67815302013218 | 1,27,642-00 |
| 30 | ಶ್ರೀ ಸಂತೋಷ್ ಕುಮಾರ್ ಕೆ.ಎಂ. ಬಿನ್. ಮಲ್ಲಪ್ಪ ಕೆಂಚಪ್ಪ, ಆವರಗೊಳ್ಳ | 67815302047718 | 27,544-00 |
| 31 | ಶ್ರೀಮತಿ ಚಂದ್ರಪ್ಪ ಕೋಂ. ಅಡಿವೆಪ್ಪ, ಕ್ಯಾರಗುಂಟೆ | 67815302052018 | 55,105-00 |
| 32 | ಶ್ರೀ ಗಣೇಶನಾಯ್ಕ ಬಿನ್. ಹಾಲ್ಯಾನಾಯ್ಕ, ಬಡಿಯಾನಾಯ್ಕನತಾಂಡ, ಕಡ್ಲೆಬಾಳು | 67815302060818 | 79,163-00 |
| 33 | ಶ್ರೀ ಹನುಮಂತಪ್ಪ ಬಿನ್. ಕೊಟ್ರಪ್ಪ, ಕಕ್ಕರಗೊಳ್ಳ | 67815302067618 | 40,174-00 |
| 34 | ಶ್ರೀ ಕರಿಯಪ್ಪ ಎಂ.ಜಿ. ಬಿನ್. ಗುಡ್ಡಪ್ಪ, ಎಂ.ಜಿ. ಹಳ್ಳಿ, ಕಡ್ಲೆಬಾಳು | 67815302070118 | 1,50,250-00 |
| 35 | ಶ್ರೀ ಮುರುಗೇಶಪ್ಪ ಬಿನ್. ರಾಜಗೋಪಾಲರೆಡ್ಡಿ, ಮಾಳಗೊಂಡನಹಳ್ಳಿ | 67815302076518 | 64,581-00 |
| 36 | ಶ್ರೀಮತಿ ಬಸವರಾಜೇಶ್ವರಿ ಹೆಚ್. ಕೋಂ. ಕರಿಬಸಪ್ಪ ರಿತ್ತಿ, ಕಕ್ಕರಗೊಳ್ಳ | 67815302076718 | 70,611-00 |
| 37 | ಶ್ರೀಮತಿ ದ್ಯಾಮಮ್ಮ ಕೋಂ. ಬೀರಪ್ಪ, ದೊಗ್ಗಳ್ಳಿ | 67815302088818 | 52,192-00 |
| 38 | ಶ್ರೀಮತಿ ಪರಿಮಳ ಕೋಂ. ತಿಪ್ಪೇಶಿ, ಚಿಕ್ಕಬೂದಿಹಾಳು, ಆವರಗೊಳ್ಳ | 67815302094118 | 1,01,609-00 |
| 39 | 1) ಶ್ರೀ ಭೀಮಾನಾಯ್ಕ ಬಿನ್. ರಂಗಾನಾಯ್ಕ 2) ಆಶಾ ಬಿನ್. ಭೀಮಾನಾಯ್ಕ ಓಬಜ್ಜಿಹಳ್ಳಿ, ಕಡ್ಲೆಬಾಳು | 67815302100018 | 68,418-00 |
| 40 | ಶ್ರೀಮತಿ ರತ್ನಮ್ಮ ಕೆ. ಕೋಂ. ಭರಮಪ್ಪ, ಕಕ್ಕರಗೊಳ್ಳ | 67815302101418 | 32,152-00 |
| 41 | ಶ್ರೀ ಪರಮೇಶ್ವರ ನಾಯ್ಕ ಬಿನ್. ಡಾಕ್ಯನಾಯ್ಕ, ಮಾಳಗೊಂಡನಹಳ್ಳಿ ಕಡ್ಲೆಬಾಳು | 67815302112718 | 52,474-00 |
| 42 | ಶ್ರೀ ಪರಮೇಶ್ವರ ನಾಯ್ಕ ಬಿನ್. ಡಾಕ್ಯನಾಯ್ಕ, ಮಾಳಗೊಂಡನಹಳ್ಳಿ ಕಡ್ಲೆಬಾಳು | 67815302112818 | 59,955-00 |
| 43 | ಶ್ರೀ ಗಣೇಶ ಬಿನ್. ರುದ್ರಪ್ಪ, ಆವರಗೊಳ್ಳ | 67815302012119 | 29,038-00 |
| 44 | ಶ್ರೀ ರುದ್ರಪ್ಪ ಎಂ.ವಿ. ಬಿನ್. ವೀರಪ್ಪ ಬಿ. ಆವರಗೊಳ್ಳ | 67815302012419 | 1,51,730-00 |
| 45 | ಶ್ರೀ ಬಿ. ಸುರೇಶ್ ಬಿನ್. ಬಸಪ್ಪ, ಮಾಳಗೊಂಡನಹಳ್ಳಿ | 67815302015919 | 65,872-00 |
| 46 | ಶ್ರೀ ಬಿ. ಸುರೇಶ್ ಬಿನ್. ಬಸಪ್ಪ, ಮಾಳಗೊಂಡನಹಳ್ಳಿ | 67815302016019 | 39,058-00 |

ಸ್ಥಳ : ದಾವಣಗೆರೆ
ದಿನಾಂಕ : 11-01-2021

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.


## ನಗರದಲ್ಲಿ ಇಂದು ಶಾಸ್ತ್ರಿ ಪುಣ್ಯದಿನ



ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಪುಣ್ಯದಿನ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11-30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಛೇರಿ ಆವರಣದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅಧ್ಯಕ್ಷತೆ ವಹಿಸುವರು ಎಂದು ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ನಗರದಲ್ಲಿಂದು ಯೋಗಾಸನ ತರಬೇತಿ

ಆಚಾರ್ಯ ಯೋಗ ವಿದ್ಯಾಶಾಲೆ ವತಿಯಿಂದ ಉಚಿತ ಯೋಗಾಸನ ತರಬೇತಿ ಶಿಬಿರವು ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ನಡೆಯಲಿದೆ. ಯೋಗ ಶಿಕ್ಷಕ ಗೋಪಿನಾಥ್ ಅವರು ಶಿಬಿರವನ್ನು ನಡೆಸಿ ಕೊಡುವರು ಎಂದು ಪುಷ್ಪಾ (9036719573) ತಿಳಿಸಿದ್ದಾರೆ.

**ಓದುಗರ ಪತ್ರ**

## ಪ್ರಜಾಪ್ರಭುತ್ವದ ಉಳಿವಿಗಾಗಿ ಸುಧಾರಣೆ ಅಗತ್ಯ

**ಮಾನ್ಯರೇ,**

ಭಾರತದಲ್ಲಿ ಪ್ರಜಾಪ್ರಭುತ್ವವು ಚುನಾವಣಾ ಕಾಲದಲ್ಲಿ ಮಾತ್ರ ಹೊರಬರುತ್ತದೆ. ನಂತರ ಬಾಗಿಲು ಹಾಕಿಕೊಳ್ಳುತ್ತದೆ. ಇದಕ್ಕೆ ಕಾರಣ ಹಣವುಳ್ಳವರೇ ಅಧಿಕಾರಕ್ಕೆ ಬರುವುದು.

ಬಂದ ನಂತರ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಧಿಕಾರದ ಏಕಸ್ವಾಮ್ಯತೆ ಯಿಂದ ಮೆರೆಯುವುದು, ಕೆಲ ಕುಟುಂಬಗಳು ಮಾತ್ರ ರಾಜಕೀಯ ಪಾರಮ್ಯ ಹೊಂದುವುದು. ಇದರಿಂದಾಗಿ ಯೋಗ್ಯರು, ಅರ್ಹರು ರಾಜಕೀಯದಿಂದ ದೂರ ಉಳಿಯುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇಂತಹ ಅವಸ್ಥೆಯಿಂದ ಭ್ರಷ್ಟಾಚಾರ ಹೆಚ್ಚಾಗಿ ಅದಕ್ಷತೆಯಿಂದ ಪ್ರಗತಿ ಕುಂಠಿತವಾಗುವುದು ಸರ್ವವೇದ್ಯ. ಈ ಪರಿಸ್ಥಿತಿಯಿಂದ ಹೊರಬರಲು ಸಂವಿಧಾನ, ಜನತಾ ಪ್ರಾತಿನಿಧಿಕ ಕಾಯ್ದೆಗೆ ತಿದ್ದುಪಡಿ ಮತ್ತು ಚುನಾವಣಾ ಸುಧಾರಣೆ ಪ್ರಸ್ತುತ ಅನಿವಾರ್ಯ.

ಭಾರತದ ಯಾವುದೇ ಚುನಾವಣೆಗಳಲ್ಲಿ ಒಬ್ಬ ವ್ಯಕ್ತಿ ಎರಡು ಬಾರಿ ಮಾತ್ರ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕು. ಈ ವ್ಯವಸ್ಥೆ ಜಾರಿಗೆ ಬಂದಲ್ಲಿ ಚುನಾವಣಾ ಸಂದರ್ಭದಲ್ಲಿ ಹಣದ ಹೊಳೆಯನ್ನು ನಿಲ್ಲಿಸಿ, ಭ್ರಷ್ಟಾಚಾರವನ್ನು ಗರಿಷ್ಠ ಮಟ್ಟದಲ್ಲಿ ನಿಯಂತ್ರಿಸಲು ಸಾಧ್ಯ ಮತ್ತು ಅರ್ಹರು, ಯೋಗ್ಯರು ಚುನಾವಣೆಗಳಲ್ಲಿ ಹಣದ ಹರಿವಿಲ್ಲದೆ ಸ್ಪರ್ಧಿಸಿ ದಕ್ಷತೆಯನ್ನು ಹೆಚ್ಚಿಸಬಹುದಾಗಿದೆ. ಇಂತಹ ಬದಲಾವಣೆಗಳನ್ನು ತರುವಾಗ ಪಟ್ಟಭದ್ರ ಹಿತಾಸಕ್ತಿಗಳಿಂದ ಪ್ರತಿರೋಧ ಸಹಜ. ಬಹಳಷ್ಟು ಚುನಾವಣೆಗಳಲ್ಲಿ ಹಣದ ಹೊಳೆ ಹರಿಸಿ ಗೆದ್ದು ಬಂದವರು ಅವರ ಭ್ರಷ್ಟ ಅನುಭವ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಮುಂದಿಟ್ಟು ಮೊಂಡುವಾದವನ್ನು ಮಂಡಿಸುತ್ತಾರೆ. ಇಂತಹವರ ಕುತರ್ಕವನ್ನು ಒಪ್ಪಬಾರದು.

ಭಾರತದಲ್ಲಿ 130 ಕೋಟಿ ಜನರಿದ್ದು ಅಪಾರವಾದ ಮಾನವ ಸಂಪನ್ಮೂಲವಿದೆ. ಅನೇಕ ಸಮರ್ಥ, ಯೋಗ್ಯ ವ್ಯಕ್ತಿಗಳು ಆಡಳಿತಕ್ಕೆ ಕಾಲಿಡಲು ಅವಕಾಶಗಳಿದ್ದು, ಈ ನಿಟ್ಟಿನಲ್ಲಿ ಭಾರತದ ನಾಗರಿಕರು ಯೋಚಿಸಿ ಜಾಗೃತರಾಗಬೇಕಾಗಿದೆ.

**- ಶ್ರೀ ಬಸವ ಪ್ರಭು ಸ್ವಾಮೀಜಿ,**
**ಮಹಿಮಾ ಪಟೇಲ್,**
**ಶಿವನಕೆರೆ ಬಸವಲಿಂಗಪ್ಪ, ಎಂ. ಸಿದ್ಧಯ್ಯ, ದಾವಣಗೆರೆ.**

## ಭಾನುವಳ್ಳಿ - ನಂದಿಗುಡಿ ರಸ್ತೆ ಕಾಮಗಾರಿಗೆ ಚಾಲನೆ



ಮಲೇಬೆನ್ನೂರು, ಜ.10- ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿ 1 ಕೋಟಿ ರೂ. ವೆಚ್ಚದಲ್ಲಿ ಭಾನುವಳ್ಳಿಯಿಂದ ನಂದಿಗುಡಿವರೆಗಿನ ರಸ್ತೆಯಲ್ಲಿ ಆಯ್ದ ಭಾಗಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್. ರಾಮಪ್ಪ ಅವರು ನಿನ್ನೆ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಎಕ್ಕೆಗೊಂದಿ ಕ್ರಾಸ್‌ನಿಂದ ಭಾನುವಳ್ಳಿವರೆಗಿನ ರಸ್ತೆ ಕಾಮಗಾರಿಗೆ 13 ಕೋಟಿ ರೂ. ಅನುದಾನ ಬಿಡುಗಡೆಗೆ ಉಪಮುಖ್ಯಮಂತ್ರಿಗಳೂ ಆದ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ ಅವರು ಸೂಚನೆ ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಸಿಕ್ಕ ನಂತರ ಕಾಮಗಾರಿ ಆರಂಭಿಸಲಾಗುವುದೆಂದು ಶಾಸಕ ರಾಮಪ್ಪ ತಿಳಿಸಿದರು.

ತಾ.ಪಂ. ಮಾಜಿ ಅಧ್ಯಕ್ಷ ಹೆಚ್.ಕೆ. ಕನ್ನಪ್ಪ, ನಿವೃತ್ತ ಶಿಕ್ಷಕ ಟಿ. ಪುಟ್ಟಪ್ಪ, ನಿವೃತ್ತ ಅಧಿಕಾರಿ ಜಿ. ಚಂದ್ರಪ್ಪ, ಯು.ಕೆ. ಅಣ್ಣಪ್ಪ, ಗ್ರಾ.ಪಂ. ನೂತನ ಸದಸ್ಯರುಗಳು, ಪಿಡಬ್ಲ್ಯೂಡಿ ಇಂಜಿನಿಯರ್ ಈ ವೇಳೆ ಹಾಜರಿದ್ದರು.

## ದೇವಾಂಗ ಸಮಾಜದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜ.10- ದೇವಾಂಗ ಸಂಘದಿಂದ ಇದೇ ದಿನಾಂಕ 24 ರಂದು ಬೆಳಿಗ್ಗೆ 11.30 ಕ್ಕೆ ಸಮಾಜದ ವಿದ್ಯಾರ್ಥಿಗಳಿಗೆ ಇಲ್ಲಿನ ದೇವಾಂಗ ವಿದ್ಯಾರ್ಥಿ ನಿಲಯದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ಜಿಲ್ಲೆಯ ದೇವಾಂಗ ಸಮಾಜದ ವಿದ್ಯಾರ್ಥಿಗಳು ಇದೇ ದಿನಾಂಕ 24ರೊಳಗಾಗಿ ಅರ್ಜಿಯೊಂದಿಗೆ ದಾಖಲೆಗಳನ್ನು ದೇವಾಂಗ ವಿದ್ಯಾರ್ಥಿ ನಿಲಯಕ್ಕೆ ಸಲ್ಲಿಸುವಂತೆ ಸಂಘದ ಅಧ್ಯಕ್ಷ ಜಿ.ಹೆಚ್. ರಾಮಚಂದ್ರ ತಿಳಿಸಿದ್ದಾರೆ. ವಿವರಕ್ಕೆ ಮೊ: 9972801195, 9448812703 ಗೆ ಸಂಪರ್ಕಿಸಬಹುದು.

# ನೆರಳು ಬೀಡಿ ಕಾರ್ಮಿಕರಿಂದ ಸಾವಿತ್ರಿಬಾಯಿ ಜನ್ಮದಿನಾಚರಣೆ



ದಾವಣಗೆರೆ, ಜ.10- ಎಸ್ಸೆಸ್ಸೆಂ ನಗರದ ನೆರಳು ಬೀಡಿ ಕಾರ್ಮಿಕರ ಯೂನಿಯನ್ ವತಿಯಿಂದ ಆಧುನಿಕ ಭಾರತದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರ 190ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಹೆಚ್. ಅರುಣ್ ಕುಮಾರ್ ಫುಲೆ ಅವರ ಭಾವಚಿತ್ರದ ಕಾರ್ಡ್‌ಗಳನ್ನು ಬಿಡುಗಡೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ತಳ ಸಮುದಾಯ ಹಾಗೂ ಹೆಣ್ಣು ಮಕ್ಕಳು ಪುರುಷರಿಗೆ ಸಮಾನವಾದ ಶಿಕ್ಷಣ ಪಡೆಯಬೇಕೆಂಬ ಕನಸನ್ನು ಕಂಡು ಅದರ ಸಾಕಾರಕ್ಕಾಗಿ ಅನೇಕ ನೋವು-ಅಪಮಾನ ಸಂಕಟಗಳನ್ನು ಅನುಭವಿಸಿದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಎಂದು ಅವರು ಸ್ಮರಿಸಿದರು.

ಆನ್‌ಲೈನ್ ಮೂಲಕ ಮಾತನಾಡಿದ ಬೆಂಗಳೂರಿನ ಚಿಂತಕ, ಬರಹಗಾರ ಮಂಗಳೂರು ವಿಜಯ್ ಫುಲೆ ದಂಪತಿಯ ಅಕ್ಷರ ಕ್ರಾಂತಿ, ಅವರ ಬದುಕಿನ ನಡೆಯನ್ನು ತಿಳಿಸಿ, ಅವರಂತೆ ನಾವಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಯೂನಿಯನ್ ಅಧ್ಯಕ್ಷರಾದ ಜಬೀನಾ ಖಾನಂ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕರಿಬಸಪ್ಪ ನಿರೂಪಿಸಿದರು. ಪತ್ರಕರ್ತ ಬಾಲಕೃಷ್ಣ, ಯೂನಿಯನ್ ಪದಾಧಿಕಾರಿಗಳಾದ ಸಬ್ರೀನಾ, ನಾಜೀಮಾ ಇನ್ನಿತರರಿದ್ದರು.

ಕಾರ್ಯಕ್ರಮದಲ್ಲಿ ಡಾ. ಹೆಚ್.ಎಸ್. ಅನುಪಮ ಬರೆದ 'ಕ್ರಾಂತಿ ಜ್ಯೋತಿ ಸಾವಿತ್ರಿ ಬಾಯಿ ಫುಲೆ' ಪುಸ್ತಕವನ್ನು ಬೀಡಿ ಕಾರ್ಮಿಕರ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.

# ವಚನ ಸಾಹಿತ್ಯ ಎಲ್ಲಾ ಕಾಲದಲ್ಲೂ ಅತ್ಯವಶ್ಯಕ

## ಹೊನ್ನಾಳಿ : ವಿವಿಧ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಮಂಜುನಾಥ್ ಕುರ್ಕಿ



ಹೊನ್ನಾಳಿ,ಜ. 10- ಸಮ-ಸಮಾಜ ನಿರ್ಮಾಣ ಮಾಡಲು ವಚನ ಸಾಹಿತ್ಯ ಎಲ್ಲಾ ಕಾಲಘಟ್ಟಗಳಲ್ಲೂ ಅತ್ಯವಶ್ಯಕವಾಗಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಚ್.ಎಸ್. ಮಂಜುನಾಥ್ ಕುರ್ಕಿ ಹೇಳಿದರು.

ಪಟ್ಟಣದ ಹಿರೇಕಲ್ಮಠದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತು ಎಸ್‌ಜೆವಿಪಿ ಶಿಕ್ಷಣ ಮಹಾವಿದ್ಯಾಲಯ ಹಿರೇಕಲ್ಮಠ ಇವರ ಸಂಯುಕ್ತಾಶ್ರಯದಲ್ಲಿ ಈ ಸಾಲಿನ ಹತ್ತೂರು ಭರಮಮ್ಮ ಪಂಡಿತ್ ಬಿ.ಎಸ್. ಭರಮಗೌಡ, ದಾವಣಗೆರೆ ಸರ್ವಮಂಗಳಮ್ಮ ಮಹಾಶರಣ ಮಾಗನೂರು ಬಸಪ್ಪ, ಲಕ್ಷ್ಮಣ ಶೇಷಪ್ಪ ವೈಶ್ಯರ ದತ್ತಿ ಉಪನ್ಯಾಸ ಕಾರ್ಯಕ್ರಮಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಜಗತ್ತಿನಲ್ಲಿ ಮನುಷ್ಯ-ಮನುಷ್ಯನಾಗಿ ಬಾಳಲು ಆಗುತ್ತಿಲ್ಲ. ಬಸವಣ್ಣನ ಸಪ್ತಸೂತ್ರಗಳನ್ನು ಯಾರು ಬೆಳೆಸಿಕೊಳ್ಳುತ್ತಾರೆಯೋ, ಬದುಕಿನ ದಾರಿ ಮತ್ತು ಉತ್ತಮ ಮೌಲ್ಯಗಳನ್ನು ರೂಪಿಸಿಕೊಳ್ಳಲು ವಚನ ಸಾಹಿತ್ಯ ದಾರಿದೀಪವಾಗುತ್ತದೆ ಎಂದರು.

ತಾಲ್ಲೂಕು ಕಸಾಪ ಅಧ್ಯಕ್ಷ ಕತ್ತಿಗೆ ಗಂಗಾಧರಪ್ಪ ಮಾತನಾಡಿ, 1905 ರಲ್ಲಿ ಮೈಸೂರು ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್‌ರಿಂದ ಸ್ಥಾಪಿತವಾದ ಕಸಾಪದಲ್ಲಿ ಇಂದು 5 ಲಕ್ಷಕ್ಕೂ ಹೆಚ್ಚು ಸಾಹಿತ್ಯಾಸಕ್ತರು ಇದ್ದಾರೆ. ತಾಲ್ಲೂಕು ಕನ್ನಡ ಭವನ ನಿರ್ಮಾಣ ಮಾಡಲು ಹಿರೇಕಲ್ಮಠ ಶ್ರೀಗಳು ನಿವೇಶನ ನೀಡಿದ್ದಾರೆ. ಮುಂದೆ ಭವನ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ವಚನ ಸಾಹಿತ್ಯದ ಪಾತ್ರ ಕುರಿತು ದತ್ತಿದಾನಿ, ನಿವೃತ್ತ ಇಂಜಿನಿಯರ್ ಎಲ್.ಎಸ್. ವೈಶ್ಯರ್ ಉಪನ್ಯಾಸ ನೀಡಿದರು.

ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡುತ್ತಾ, ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿರುವ ನಾಡಿಗೆ ಕನ್ನಡ ಸಂಸ್ಕೃತಿ, ನಾಡು-ನುಡಿ ಬೆಳವಣಿಗೆಗೆ ಎಲ್ಲರು ನಿತ್ಯ ಶ್ರಮಿಸಬೇಕು ಎಂದರು.

ಇದೇ ವೇಳೆ ಡಾ.ಎಚ್.ಎಸ್. ಮಂಜುನಾಥ್ ಕುರ್ಕಿ ಅವರನ್ನು ಸನ್ಮಾನಿಸಲಾಯಿತು. ಶ್ರೀ ಚನ್ನಪ್ಪ ಸ್ವಾಮಿ ವಿದ್ಯಾಪೀಠದ ಆಡಳಿತಾಧಿಕಾರಿ ಡಾ.ಎಚ್. ಎಸ್. ಜಯಪ್ಪ ಮಾತನಾಡಿದರು. ಜಿಲ್ಲಾ ಕಸಾಪ ಕಾರ್ಯದರ್ಶಿ ದಿಳ್ಯಪ್ಪ, ಜಿ.ಪಂ. ಮಾಜಿ ಸದಸ್ಯ ಎ.ಬಿ. ನೇಮಿಚಂದ್ರಪ್ಪ, ಜಯಮ್ಮ, ದಾವಣಗೆರೆಯ ಸುನಂದಾದೇವಿ, ಎಂ.ಬಿ. ಸಂಗಮೇಶ್ವರಗೌಡ, ಕಸಾಪ ಗೌರವ ಕಾರ್ಯದರ್ಶಿ ಕೆ. ಶೇಖರಪ್ಪ, ಎಂ.ಎಸ್. ರೇವಣಪ್ಪ, ಪಿ.ಎಂ. ಸಿದ್ದಯ್ಯ, ಕತ್ತಿಗೆ ನಾಗರಾಜ್, ಶಾರದ ಕಣಗಟಗಿ, ಧನಂಜಯ, ಜಯಪ್ಪ, ಶಾಂತರಾಜ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಶಾಪಗಳಿಂದ ಕಾಂಗ್ರೆಸ್ ಅವನತಿ

(1ನೇ ಪುಟದಿಂದ) ನಿಷೇಧ ವಿರೋಧಿಸಿದ್ದರ ಪರಿಣಾಮ ಗೋಮಾತೆಯ ಶಾಪವೂ ಕಾಂಗ್ರೆಸ್‌ಗೆ ತಟ್ಟಿದೆ. ಇದೆಲ್ಲರ ಕಾರಣದಿಂದಾಗಿ ಕಾಂಗ್ರೆಸ್ ಇಂದು ರಾಷ್ಟ್ರದಲ್ಲಿ ಹೇಳ ಹೆಸರಿಲ್ಲದಂತಾಗಿದೆ ಎಂದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಾರದೆ ಇದ್ದರೂ ಈಗಾಗಲೇ ಮುಖ್ಯಮಂತ್ರಿ ಹುದ್ದೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ. ಕೆ.ಶಿವಕುಮಾರ್ ಹಾಗೂ ಸತೀಶ್ ಜಾರಕಿಹೊಳಿ ನಡುವೆ ಕಿತ್ತಾಟ ಪ್ರಾರಂಭವಾಗಿದೆ ಎಂದು ಲೇವಡಿ ಮಾಡಿದರು.

ಮತ ಬ್ಯಾಂಕ್‌ಗಾಗಿ ರಾಷ್ಟ್ರದ್ರೋಹದ ಕೆಲಸಗಳಲ್ಲಿ ಭಾಗಿಯಾದ ಪರಿಣಾಮ ದೆಹಲಿಯ ತಿಹಾರ್ ಜೈಲಿನಲ್ಲಿ ಕಾಂಗ್ರೆಸ್ ಮುಖಂಡರೇ ತುಂಬಿ ತುಳುಕುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಮಾತನಾಡಿ, ಮಾಜಿ ಶಾಸಕ ಡಿ.ಜಿ.ಶಾಂತನಗೌಡ ಅವರು ಯಾರ ಕಷ್ಟವನ್ನೂ ಕೇಳದೆ ಮನೆಯಲಿದ್ದು, ಈಗ ಹೊರಗಡೆ ಬಂದು ನನ್ನ ಬಗ್ಗೆ ವಿನಾ ಕಾರಣ ಟೀಕೆ ಮಾಡುತ್ತಿದ್ದಾರೆ. ನನ್ನ ಬಗ್ಗೆ ಭ್ರಷ್ಟಾಚಾರದ ಆರೋಪ ಇದ್ದರೆ ಬಹಿರಂಗ ಪಡಿಸಲಿ ಎಂದು ಸವಾಲು ಹಾಕಿದರು.

ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಪಟ್ಟಣದ ಕುಡಿಯುವ ನೀರಿಗೆ 25 ಕೋಟಿ ರೂ. ಹಾಗೂ ಪಟ್ಟಣದ ಯುಜಿಡಿ ಕಾಮಗಾರಿಗೆ 60 ಕೋಟಿ ರೂ., ನ್ಯಾಮತಿ ಕುಡಿಯುವ ನೀರಿಗೆ 40 ಕೋಟಿ ರೂ.ಹಣ ಬಿಡುಗಡೆಗೆ ಹಣಕಾಸು ಇಲಾಖೆಯಿಂದ ಒಪ್ಪಿಗೆ ಸಿಕ್ಕಿದೆ. ಟೆಂಡರ್ ಮಾತ್ರ ಬಾಕಿ ಇದೆ ಎಂದು ಹೇಳಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ಕೋವಿಡ್‌ನಂತಹ ಮಾರಕ ಕಾಯಿಲೆ ಸಮಯದಲ್ಲೂ ಶಾಸಕ ಎಂ.ಪಿ. ರೇಣುಕಾಚಾರ್ಯ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಜನತೆಗೆ ಸಾಂತ್ವನ ಹೇಳಿದ್ದು ಶ್ಲಾಘನೀಯ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ.ಸುರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಾಂತರಾಜ್ ಪಾಟೀಲ್, ಬಯಲು ಸೀಮೆ ನಿಗಮ ಮಂಡಲಿ ಅಧ್ಯಕ್ಷ ಜೀವನ್‌ಮೂರ್ತಿ, ಜಿ.ಪಂ. ಸದಸ್ಯರಾದ ದೀಪಾ ಜಗದೀಶ್, ವೀರಶೇಖರಪ್ಪ, ಎಂ.ಆರ್.ಮಹೇಶ್, ಉಮಾ ರಮೇಶ್, ಸುರೇಂದ್ರನಾಯ್ಕ್, ತಾ. ಪಂ. ಅಧ್ಯಕ್ಷೆ ಚಂದ್ರಮ್ಮ ಹಾಲೇಶಪ್ಪ ,ಉಪಾಧ್ಯಕ್ಷ ರಂಗನಾಥ್, ನ್ಯಾಮತಿ ತಾ.ಪಂ. ಅಧ್ಯಕ್ಷ ರವಿಕುಮಾರ್, ಪುರಸಭೆ ಅಧ್ಯಕ್ಷ ಕೆ.ವಿ. ಶ್ರೀಧರ್, ಉಪಾಧ್ಯಕ್ಷೆ ರಂಜಿತಾ ಚನ್ನಪ್ಪ, ಎಪಿಎಂಸಿ ಅಧ್ಯಕ್ಷ ಸುರೇಶ್, ಕೃಷಿಕ ಸಮಾಜದ ಅಧ್ಯಕ್ಷ ಹನುಮಂತಪ್ಪ, ಜಿ.ಪಂ. ಮಾಜಿ ಉಪಾಧ್ಯಕ್ಷ ತಿಪ್ಪಾನಾಯ್ಕ್, ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ಮಾರುತಿನಾಯ್ಕ್, ಸಿ. ಆರ್.ಶಿವಾನಂದ್ ಹಾಗೂ ಇತರರಿದ್ದರು.

# ಮರಳಿ ಶಾಲೆಗೆ

ಬನ್ನಿ ಮಕ್ಕಳೆ ನೀವು ಮರಳಿ ಶಾಲೆಗೆ ಈಗ
ಓದಿ ಜಾಣರಾಗಿ,
ಮಕ್ಕಳೆ ಬನ್ನಿರಿ ನೀವು ಪಾಠವ ಕಲಿಯಿರಿ ಬೇಗ
ವಿದ್ಯಾವಂತರಾಗಿ,
ಅಕ್ಷರ ಕಲಿತು ಸಾಕ್ಷರರಾಗಿ
ಸಾಕ್ಷರತೆಯ ದೀಪವ ಬೆಳಗಿ
ಗಂಧದ ಪರಿಮಳ ಬೀರುವ
ಕನ್ನಡ ಕಸ್ತೂರಿ ನೀವಾಗಿ
ಮುದ್ದಿನ ಮಕ್ಕಳೇ ನಮ್ಮ ಪ್ರೀತಿಯ ಮಕ್ಕಳೇ
ಓದಿ ತಿಳಿಯಿರಿ ನೀವು ನೋಡಿ ಕಲಿಯಿರಿ.

ಗುರು ಹಿರಿಯರಿಗೆ ಗೌರವ ತೋರುತ
ಬದುಕಲು ಕಲಿಬೇಕು
ನೀವು ಬಾಳೋದು ಕಲಿಬೇಕು
ಶಿಕ್ಷಕರಿಂದ ವಿದ್ಯೆಯ ಕಲಿತು
ಕೀರ್ತಿಯ ತರಬೇಕು
ಒಳ್ಳೆಯ ಖ್ಯಾತಿಯ ಪಡಿಬೇಕು
ನಿಮ್ಮ ಯಶಸ್ಸು ಅದುವೇ ತಾನೆ
ಗುರುವಿಗೆ ಕಾಣಿಕೆಯು
ಆ ಕಾಣಿಕೆಯಿಂದ ಗುರುವಿಗಾಗುವುದು
ಮಹದಾನಂದವು
ಹೀಗೆಯೆ ನೀವು ಎಲ್ಲವ ಕಲಿತು
ದೇಶವ ಬೆಳಗೋ ಜ್ಞಾನಿಗಳಾಗಿ
ನಿಮ್ಮನು ಪಡೆದ ತಾಯಿ ತಂದೆಯರ
ಜೀವನ ಸಾರ್ಥಕ ಅವರ ಬದುಕು ಸಾರ್ಥಕ
ಹೆಮ್ಮೆಯ ಮಕ್ಕಳೇ ನಮ್ಮ ನಲ್ಮೆಯ ಮಕ್ಕಳೇ
ಕೂಡಿ ಕಲಿಯಿರಿ ನೀವು ಹಾಡಿ ನಲಿಯಿರಿ.

ಭಯವನು ಬಿಟ್ಟು ಧೈರ್ಯದಿಂದಲೇ
ಶಾಲೆಗೆ ಹೋಗುವ ಎಲ್ಲರು ಶಾಲೆಗ್ಹೋಗುವಾ
ಆಲಸಿಯಾಗದೆ ಓದುತ ಬರೆಯುತ
ಗಳಿಸಿರಿ ಜ್ಞಾನವ ಮಕ್ಕಳೆ ಪಡೆಯಿರಿ ಜ್ಞಾನವ
'ವಿದ್ಯೆಯಿಂದಲೆ ವಿನಯವು' ಎನ್ನುವ ನೀತಿಪಾಠವ
'ಇಂದಿನ ಮಕ್ಕಳೆ ನಾಳಿನ ಪ್ರಜೆಗಳು'
ಎಂಬ ಸತ್ಯವ
ತೋರಿಸಿ ನೀವು ಎಲ್ಲರ ಮುಂದೆ
ಸಾಧಿಸಿ ಹೀಗೆ ಛಲವನು ಬಿಡದೆ
ಗುರುಗಳ ಮೆಚ್ಚಿನ ಶಿಷ್ಯರಾಗಿ
ಸಾಧನೆ ಮಾಡಿರಿ ಚಿಣ್ಣರೆ ಸಾಧಿಸಿ ತೋರಿಸಿರಿ
ಕನ್ನಡ ಮಕ್ಕಳೇ ಕರುನಾಡಿನ ಮಕ್ಕಳೇ
ಆಡಿ ಕುಣಿಯಿರಿ ನೀವು ನೋಡಿ ತಣಿಯಿರಿ

- ಜಿ.ಎಸ್. ಗಾಯತ್ರಿ,
ಶಿಕ್ಷಕಿ, ಬಾಪೂಜಿ ಶಾಲೆ, ಹರಿಹರ.

# ಪಾಕ್ : ವಿದ್ಯುತ್ ಕಡಿತವಾಗಿ ಕತ್ತಲಲ್ಲಿ ಮುಳುಗಿದ್ದ ನಗರಗಳು

ಇಸ್ಲಮಾಬಾದ್, ಜ.10 – ಪಾಕಿಸ್ತಾನದ ವಿದ್ಯುತ್ ಉತ್ಪಾದನಾ ಹಾಗೂ ವಿತರಣಾ ವ್ಯವಸ್ಥೆಯಲ್ಲಿ ಪ್ರಮುಖ ಸಮಸ್ಯೆಯಾದ ಕಾರಣ ದೇಶಾದ್ಯಂತದ ಹಲವು ನಗರ, ಪಟ್ಟಣಗಳು ಮಧ್ಯರಾತ್ರಿಯಲ್ಲಿ ಕತ್ತಲೆಯಲ್ಲಿ ಮುಳುಗಿದ್ದವು.

ಶನಿವಾರ ಮಧ್ಯರಾತ್ರಿಗೆ ಮುಂಚೆ ಏಕಕಾಲದಲ್ಲಿ ಪ್ರಮುಖ ನಗರಗಳಲ್ಲಿ ವಿದ್ಯುತ್ ಕಡಿತಗೊಂಡಿದೆ. ಕರಾಚಿ, ರಾವಲ್‌ಪಿಂಡಿ, ಲಾಹೋರ್, ಇಸ್ಲಾಮಾಬಾದ್, ಮುಲ್ತಾನ್ ಹಾಗೂ ಇತರೆ ನಗರಗಳಲ್ಲಿ ವಿದ್ಯುತ್ ಪೂರೈಕೆ ಸ್ಥಬ್ಧಗೊಂಡಿತ್ತು.

ಸಿಂಧ್ ಪ್ರಾಂತ್ಯದ ಗುಡ್ಡು ವಿದ್ಯುತ್ ಘಟಕದಲ್ಲಿ ಸಮಸ್ಯೆಯಾದ ಕಾರಣ ಶನಿವಾರ ರಾತ್ರಿ 11.41ರ ಸಮಯದಲ್ಲಿ ವಿದ್ಯುತ್ ಪೂರೈಕೆ ನಿಂತಿತ್ತು ಎಂದು ಪಾಕಿಸ್ತಾನದ ಇಂಧನ ಸಚಿವ ಓಮರ್ ಅಯೂಬ್ ಖಾನ್ ಹೇಳಿದ್ದಾರೆ. ಇಸ್ಲಾಮಾಬಾದ್, ರಾವಲ್‌ಪಿಂಡಿ, ಲಾಹೋರ್, ಮುಲ್ತಾನ್, ಕರಾಚಿ ಹಾಗೂ ಫೈಸಲಾಬಾದ್ ಸೇರಿದಂತೆ ಪ್ರಮುಖ ನಗರಗಳಲ್ಲಿ ವಿದ್ಯುತ್ ಪೂರೈಕೆ ಸಾಮಾನ್ಯವಾಗಿದೆ ಇಲ್ಲವೇ ಭಾಗಶಃ ಸರಿಯಾಗಿದೆ. ಇನ್ನು ಕೆಲವೆಡೆ ವಿದ್ಯುತ್ ನೆಲೆಗೊಳ್ಳಲು ಸಮಯ ಬೇಕಿದೆ ಎಂದವರು ಹೇಳಿದ್ದಾರೆ.

# ಟ್ರಂಪ್ ಉಚ್ಛಾಟನೆಗೆ ರಿಪಬ್ಲಿಕನ್ ಸೆನೆಟರ್ ಬೆಂಬಲ

ವಾಷಿಂಗ್ಟನ್, ಜ. 10 – ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಚ್ಛಾಟನೆಗೆ ಮತ್ತಷ್ಟು ಬೆಂಬಲ ದೊರೆತಿದ್ದು, ರಿಪಬ್ಲಿಕನ್ ಸೆನೆಟ್ ಪ್ಯಾಟ್ ಟೂಮಿ ಅವರು ಟ್ರಂಪ್ ಉಚ್ಛಾಟನೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಟ್ರಂಪ್ ಕೃತ್ಯ ಉಚ್ಛಾಟನೆಗೆ ತಕ್ಕದ್ದಾಗಿದೆ ಎಂದು ಸೆನೆಟರ್ ಹೇಳಿದ್ದಾರೆ. ಆದರೆ, ಮಹಾಭಿಯೋಗದ ನಿಲುವಳಿ ಮಂಡನೆಯಾದರೆ ಬೆಂಬಲಿಸುವ ಬಗ್ಗೆ ಅವರು ಸ್ಪಷ್ಟ ಹೇಳಿಕೆ ನೀಡಿಲ್ಲ.

# ಹರಿಹರದಲ್ಲಿ ಸಿಐಟಿಯು ಪ್ರತಿಭಟನೆ

ಹರಿಹರ, ಜ.10- ರೈತರು ಅಸಂಘಟಿತ ಹಾಗೂ ಇತರೆ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ತಾಲ್ಲೂಕು ಸಮಿತಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿತು.

ಕಟ್ಟಡ ಕಾರ್ಮಿಕರ ಸಂಘ, ಬೀದಿಬದಿ ವ್ಯಾಪಾರಿಗಳ ಸಂಘ, ಗ್ರಾಮ ಪಂಚಾಯ್ತಿ ನೌಕರರ ಸಂಘ, ಕಸಾಯಿ ಕಾರ್ಮಿಕರ ಸಂಘ, ಕೃಷಿ ಕೂಲಿಕಾರರ ಸಂಘ, ರೈತರ ಸಂಘಗಳ ಹಲವು ಬೇಡಿಕೆಗಳ ಕುರಿತಾಗಿ ಕ್ರಮ ವಹಿಸುವಂತೆ ತಮ್ಮ ಅಧ್ಯಕ್ಷತೆಯಲ್ಲಿ ಸಿಐಟಿಯು ಸಂಘಟನೆಯ ಮುಖಂಡರ ಸಭೆ ನಡೆಸಿ, ಶೀಘ್ರವೇ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ಅವರಿಗೆ ಮನವಿ ಮಾಡಲಾಯಿತು.

ಈ ಸಂದರ್ಭಲ್ಲಿ ಸಿಐಟಿಯು ತಾಲ್ಲೂಕು ಸಂಚಾಲಕ ಕೆ.ಹೆಚ್. ಹಾಲೇಶ್, ಜಿಲ್ಲಾ ಸಂಚಾಲಕ ಆನಂದರಾಜು, ಕಸಾಯಿ ಕಾರ್ಮಿಕ ಮುಖಂಡ ಇಮ್ತಿಯಾಜ್, ಬೀಡಿ ಕಾರ್ಮಿಕ ಮುಖಂಡ ಓಬೇದುಲ್ಲಾ, ಬೀದಿ ಬದಿ ಮಾರಾಟಗಾರರ ಮುಖಂಡರಾದ ಡಿ. ಮಂಜಮ್ಮ, ಆಯೂಬ್, ಕೃಷಿ ಕೂಲಿ ಕಾರ್ಮಿಕರ ಮುಖಂಡ ಹನುಮಂತಪ್ಪ, ರೈತ ಮುಖಂಡ ಮಲ್ಲಿಕಾರ್ಜುನಯ್ಯ, ಕಟ್ಟಡ ಕಾರ್ಮಿಕರ ಮುಖಂಡ ಭೀಮಣ್ಣ, ಗ್ರಾ.ಪಂ. ನೌಕರರ ಮುಖಂಡರಾದ ಕೆ.ಆರ್. ಬಸವರಾಜ್ ಇನ್ನಿತರರಿದ್ದರು.

# ಅಹಿಂದ ಪ್ರಜಾ ಶಕ್ತಿಯ ಶಾಖಾ ಘಟಕ ಉದ್ಘಾಟನೆ

ದಾವಣಗೆರೆ, ಜ.10- 12ನೇ ಶತಮಾನದಲ್ಲಿ ಬಸವಣ್ಣನವರ ಕಾಲದಲ್ಲಿದ್ದಂತಹ ಅಸ್ಪೃಶ್ಯತಾ ಮನೋಭಾವ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಾ ಬಂದಿದ್ದು, ಇನ್ನು ಸಂಪೂರ್ಣವಾಗಿ ತೊಲಗಿಸುವಲ್ಲಿ ಅಹಿಂದ ಪ್ರಜಾ ಶಕ್ತಿಯಂತಹ ಸಂಘಟನೆಗಳು ಹಾಗೂ ಸಂಘಟನಾಕಾರರ ಪಾತ್ರ ಮುಖ್ಯವಾಗಿದೆ ಎಂದು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದರು.

ನಗರದ 25ನೇ ವಾರ್ಡ್ ಡಿಸಿಎಂ ಟೌನ್ ಶಿಪ್‌ನ ಅಹಿಂದ ಪ್ರಜಾ ಶಕ್ತಿಯ ಶಾಖಾ ಘಟಕವನ್ನು ಶ್ರೀಗಳು ಇಂದು ಉದ್ಘಾಟಿಸಿದರು.

ಅಹಿಂದ ಪ್ರಜಾ ಶಕ್ತಿಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಕಾರ್ಯಪ್ರವೃತ್ತವಾಗಿ ಇಡೀ ಕರ್ನಾಟಕದ ತುಂಬಾ ಹರಡಲಿ ಎಂದು ಆಶೀರ್ವದಿಸಿದರು.

ಈ ಸಂದರ್ಭದಲ್ಲಿ 25ನೇ ವಾರ್ಡ್ ನಗರಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ಅಹಿಂದ ಪ್ರಜಾ ಶಕ್ತಿಯ ರಾಜ್ಯಾಧ್ಯಕ್ಷ ಜಿ.ಎಂ. ಗೋವಿಂದರಾಜು, ರಾಜ್ಯ ಉಪಾಧ್ಯಕ್ಷ ಎಸ್.ಎಸ್. ಗಿರೀಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಪ್ರವೀಣ್ ಕುಮಾರ್, ರಾಜ್ಯ ಸಾಮಾಜಿಕ ಜಾಲತಾಣದ ಉಸ್ತುವಾರಿ ಮೊಹಮ್ಮದ್ ಜಿಕ್ರಿಯಾ, ಜಿಲ್ಲಾಧ್ಯಕ್ಷ ಜೆ.ಆರ್. ಮಾಲತೇಶ್, ಜಿಲ್ಲಾ ಉಪಾಧ್ಯಕ್ಷ ಹನುಮಂತಪ್ಪ ಆವರಗೆರೆ, ಅಹಿಂದ ಕುಮಾರ್, ಮಂಜುನಾಥ್, ಹಬೀಬ್ ಸೇರಿದಂತೆ ಅಹಿಂದ ಮುಖಂಡರು, ಕಾರ್ಯಕರ್ತರು ಇದ್ದರು.



# ಹರಜಾತ್ರೆಗೆ ವರ್ಚ್ಯುಯಲ್-ವೇದಿಕೆ ವ್ಯವಸ್ಥೆಗೆ ಸಿದ್ಧತೆ

(1ನೇ ಪುಟದಿಂದ) ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಸ್ವಾವಲಂಬಿ ಸಮಾವೇಶ ಉದ್ಘಾಟಿಸುವರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಸಚಿವರುಗಳಾದ ಕೆ.ಎಸ್. ಈಶ್ವರಪ್ಪ, ರಮೇಶ ಜಾರಕಿಹೊಳಿ, ಆನಂದ್ ಸಿಂಗ್, ಶಶಿಕಲಾ ಜೊಲ್ಲೆ, ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ, ಕರುಣಾಕರರೆಡ್ಡಿ, ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರಪ್ಪ, ಪ್ರೊ. ಲಿಂಗಣ್ಣ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಅಂದು ಮಧ್ಯಾಹ್ನ 3ಕ್ಕೆ ಭೂ ತಪಸ್ವಿ ಸಮಾವೇಶದಲ್ಲಿ ರೈತರ ಅಭಿವೃದ್ಧಿ ವಿಚಾರವಾಗಿ ಚರ್ಚೆ ನಡೆಯಲಿದೆ. ಇಳಕಲ್‌ನ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಶ್ರೀ ಗುರು ಮಹಾಂತ ಶಿವಯೋಗಿ, ಹಾವೇರಿ ಹುಕ್ಕೇರಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಸಾನ್ನಿಧ್ಯದಲ್ಲಿ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಸಮಾವೇಶ ಉದ್ಘಾಟಿಸುವರು. ಸಚಿವರುಗಳಾದ ವಿ. ಸೋ ಮಣ್ಣ, ಜಗದೀಶ್ ಶೆಟ್ಟರ್, ಬಸವರಾಜ್ ಬೊಮ್ಮಾಯಿ, ಸಿ.ಸಿ. ಪಾಟೀಲ್, ಬಿ.ಸಿ. ಪಾಟೀಲ್, ಡಾ. ಕೆ. ಸುಧಾಕರ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಬಸವನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ ಮತ್ತಿತರರು ಆಗಮಿಸಲಿದ್ದಾರೆ. ಸಂಜೆ 6ಕ್ಕೆ ಅರ್ಜುನ್ ಇಟಗಿ ರಸಮಂಜರಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ದಿನಾಂಕ 15ರ ಬೆಳಗ್ಗೆ 11.30ಕ್ಕೆ ಯುವರತ್ನ ಸಮಾವೇಶ ನಡೆಯಲಿದ್ದು, ವಿಜಯಪುರ ಸ್ಪರ್ಶ ಫೌಂಡೇಷನ್ ಅಧ್ಯಕ್ಷೆ ಸಂಯುಕ್ತಾ ಪಾಟೀಲ್ ಉದ್ಘಾಟಿಸುವರು. ನಟ ಪುನಿತ್ ರಾಜಕುಮಾರ್, ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಿ.ಪಿ. ಯೋಗೇಶ್ವರ ಮತ್ತಿತರರು ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿಯವರ ತೃತೀಯ ಪೀಠಾರೋಹಣ ಕಾರ್ಯಕ್ರಮಕ್ಕೆ ನಡೆಯಲಿದೆ. ಹುಬ್ಬಳ್ಳಿಯ ಮೂರು ಸಾವಿರ ಮಠ ಮಹಾಸಂಸ್ಥಾನದ ಶ್ರೀ ಡಾ. ಗುರುಸಿದ್ದ ರಾಜಯೋಗೀಂದ್ರ ಮಹಾಸ್ವಾಮೀಜಿ, ಹಗರಿಬೊಮ್ಮನಹಳ್ಳಿ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಶಾಖಾ ಮಠದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸುವರು. ಪೀಠಾರೋಹಣ ಕಾರ್ಯಕ್ರಮ ಉದ್ಘಾಟನೆಯನ್ನು ವಿಧಾನಸಭಾ ಉಪಸಭಾಪತಿ ಆನಂದ ಮಾಮನಿ ನೆರವೇರಿಸುವರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕರಾದ ಶಿವಾನಂದ ಪಾಟೀಲ್, ಎಸ್. ರಾಮಪ್ಪ ಮತ್ತಿತರರು ಭಾಗವಹಿಸುವರೆಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ವಾಣಿ ಶಿವಣ್ಣ, ಕೆ. ಶಿವಕುಮಾರ್, ಹೆಚ್.ಎನ್. ನಾಗರಾಜ, ಪತ್ರೆ ರಾಜಣ್ಣ, ಎಂ. ದೊಡ್ಡಪ್ಪ, ಎಸ್.ಸಿ. ಕಾಶೀನಾಥ್ ಇದ್ದರು.

## 12ಕ್ಕೆ ತುಂಗಭದ್ರಾ ನದಿ ಸ್ವಚ್ಛತಾ ಆಂದೋಲನಾ

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ಪ್ರತಿ ಭಾನುವಾರ ತುಂಗಾಭದ್ರಾ ನದಿ ತೀರದಲ್ಲಿ ಸ್ವಚ್ಛತಾ ಆಂದೋಲನವನ್ನು ನಮ್ಮ ಊರು-ನಮ್ಮ ಹೊಣೆ ಕಾರ್ಯಕ್ರಮದಡಿ ಮಾಡುತ್ತಿದ್ದು, ನಾಡಿದ್ದು ದಿನಾಂಕ 12ರಂದು ಬೆಳಗ್ಗೆ 6 ಗಂಟೆಯಿಂದ ಹರಿಹರದ ಶ್ರೀ ರಾಘವೇಂದ್ರ ಮಠದ ಹತ್ತಿರ ತುಂಗಭದ್ರಾ ನದಿ ತೀರದಲ್ಲಿ ಸ್ವಚ್ಛತಾ ಆಂದೋಲವಿದೆ.

-ಬಿ.ಸಿ. ಉಮಾಪತಿ

## ಸಮುದಾಯಕ್ಕೆ ಒಬಿಸಿಗೆ ಪ್ರಮುಖ ಒತ್ತಾಯ

ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯಗಳನ್ನು ಕೇಂದ್ರ ಸರ್ಕಾರ ಒಬಿಸಿ ಮೀಸಲಾತಿಗೆ ಸೇರ್ಪಡೆ ಮಾಡಬೇಕು ಎನ್ನುವುದು ವೀರಶೈವ ಲಿಂಗಾಯತ ಪಂಚಮಸಾಲಿಗಳ ಪ್ರಮುಖ ಒತ್ತಾಯವಾಗಿದೆ ಎಂದು ಮುಖಂಡ ಬಿ. ಲೋಕೇಶ್ ತಿಳಿಸಿದ್ದಾರೆ.

ಸಮುದಾಯಕ್ಕೆ 2ಎ ಮೀಸಲಾತಿಗಾಗಿ ಹಾಗೂ ಒಬಿಸಿಗೆ ಸೇರ್ಪಡೆಗಾಗಿ ಕೂಡಲಸಂಗಮ ಶ್ರೀಗಳ ಹೋರಾಟಕ್ಕೆ ನಮ್ಮಗಳ ಅಭ್ಯಂತರವಿಲ್ಲ. ಅವರು ಒಂದು ರೀತಿಯಾಗಿ ಹೋರಾಟ ಮಾಡುತ್ತಿದ್ದು, ನಾವು ಕಾನೂನಾತ್ಮಕ ಹೋರಾಟ ನಡೆಸುವುದು ನಮ್ಮಗಳ ನಿಲುವು. ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಬೇಕು. ಅದಕ್ಕಿಂತ ಮುಖ್ಯವಾಗಿ ಒಬಿಸಿ ಪಟ್ಟಿಗೆ ಸೇರಿಸಬೇಕೆಂಬ ಪ್ರಮುಖ ಒತ್ತಾಯವಾಗಿ ಈಗಾಗಲೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಮಾಜದ ಯುವ ಘಟಕ ಮನವಿ ಮಾಡಿಕೊಂಡಿದೆ ಎಂದರು.

# ಭೂತ ಭಯ

ನಟ್ಟಿರುಳಿನಲಿ ಚಳಿಗಾಳಿ ಬೀಸಲು
ನಡುಗುತಲಿ ನಡೆದೆ ಕಿಟಕಿ ಬಾಗಿಲು ಹಾಕಲು
ಕತ್ತಲಲಿ ಕಂಡಿತು ಭೂತವೊಂದು ಎದುರು ಮನೆ
ಬೇಲಿಯಲಿ
ಕರೆದು ತೋರಿಸಿದ ಗಂಡನಿಗೂ ಆಯಿತು ದಿಗಿಲು

ಬಿಳಿಯ ಸೀರೆಯ ಭೂತಿನಿ ಹಾಗೆ
ಸರಿದಾಡುತಿಹಳು ಆಚೆ ಈಚೆ
ಭಯದಿ ಬಿಳಚಿಕೊಂಡೆವು ನೋಡುತಾ
ಕಿಟಕಿ ಮುಚ್ಚಿದರೂ ಕಣ್ಣಮುಂದೆ ಅಲೆದಾಡಿದಳು

ನಿದ್ದೆ ಹತ್ತದೆ ಒದ್ದಾಡಿ ಕಳೆದೆವು ರಾತ್ರಿಯನು
ಬೆಳಗು ಹರಿದು ಕಿಟಕಿ ತೆರೆದು ನೋಡಲು
ಬೇಲಿ ಮೇಲೆ ಹರಡಿದೆ ಬಿಳಿಯ ಪಂಚೆಯೊಂದು
ಬೀಸೋ ಗಾಳಿಗೆ ಹಾರಾಡುತಿದೆ ನವಿರಾಗಿ

ಉಸಿರು ಚೆಲ್ಲಿ ನಾಚಿದೆವು ನಮ್ಮ ಭ್ರಮೆಗೆ
ಮನಸಾರೆ ನಕ್ಕೆವು ಬೇಸ್ತು ಬಿದ್ದ ಪರಿಗೆ
ದೆವ್ವ ಭೂತಗಳು ನಮ್ಮ ಕಲ್ಪನೆ
ಪ್ರಾಣ ಭಯವ ತೋರುವೆವು ಸುಮ್ಮನೆ.

- ಎಂ. ಎಸ್.ಮಂಜುಳಾ ಮಂಜಪ್ಪ, ದಾವಣಗೆರೆ.

# ನೀವೇನಂತೀರಿ ! ?

ಅಕಾಲಿಕ ಮಳೆ, ಮುಪ್ಪು, ಮರಣ;
ಕಸಿದುಕೊಳ್ಳುವವು ಹರ್ಷದ ಹೂರಣ...
ಅನಧಿಕೃತ ಮುದ್ರೆ; ಅವಾಂತರದ ಜನಕ!
ಅನಪೇಕ್ಷಿತ ಸೌಂದರ್ಯ; ಕಸದ ಕಣಕ
'ಹದವಿರದ ಪದ; ಗೋಡೆಯಿರದ ಕದ' ಅಂತಾನೆ
ಕೊಂಕುತಿಮ್ಮ!?

- ಮಹಾಂತೇಶ್ ಬಿ.ನಿಟ್ಟೂರು
ದಾವಣಗೆರೆ.


**ಸೈಟುಗಳು ಮಾರಾಟಕ್ಕಿವೆ**
1) 40x60 East ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, 2) 50x100 East ಶಿವ ಪಾರ್ವತಿ ಬಡಾವಣೆಯಲ್ಲಿ, 3) 74x40 ಮಹಾಲಕ್ಷ್ಮಿ ಲೇ ಔಟ್‌ನಲ್ಲಿ Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕೆ ಇವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, ಬನಶ್ರೀ ಬಡಾವಣೆಯಲ್ಲಿ 30x40 ದಕ್ಷಿಣ, ಆಂಜನೇಯ ಬಡಾವಣೆಯಲ್ಲಿ 40x60 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ**
ನಾಗನೂರಿನಲ್ಲಿ ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ. : 94489 66128

**ಸೋಫ ಮೆಸ್ ಮಾಡುತ್ತೇವೆ.**
ನಮ್ಮಲ್ಲಿ ಸೋಫ ಮೆಸ್, ಎಲ್ಲಾ ತರಹದ ಕುಷನ್ ಸೋಫಾ, ಎಲ್ಲಾ ಬೆಡ್ ಸ್ಪಾಂಜ್, ವುಡ್ ಪಾಲಿಶ್ ಮಾಡುತ್ತೇವೆ. ರಿಪೇರಿ ಸಹ ಮಾಡುತ್ತೇವೆ.
98452 79197
74830 88761

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**3 BHK ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತರಾಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದವರಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಬೇಕಾಗಿದ್ದಾರೆ**
ಹೋಟೆಲ್ ನಲ್ಲಿ ಚೈನೀಸ್/ನಾರ್ತ್ ಫುಡ್, ತಂದೂರಿ ರೊಟಿ, ಸ್ಪೆಷಲ್ ಟೀ/ ಕಾಫಿ, ರೊಟ್ಟಿ/ ಚಪಾತಿ ಮಾಡುವವರು, ಸಪ್ಲೈಯರ್, ಕ್ಲೀನರ್ ಬೇಕಾಗಿದ್ದಾರೆ.
ಸಂಪರ್ಕಿಸಿ :-
99012 36631

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ
40x84 North, 80x60 East, 80x60 West, 30x50 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕೆ ಇವೆ**
ವಾಜಪೇಯಿ ಬಡಾವಣೆಯಲ್ಲಿ 30x40 ಪಶ್ಚಿಮ, 30x50 ಪೂರ್ವ, 30x40 ಪೂರ್ವ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, 40x60 ಉತ್ತರ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**Coding and Decoding Classes**
2nd std to 5th std
Bruit Abacus and Vedic Maths.
Mob: 96201 53806

**ತಕ್ಷಣ ಬೇಕಾಗಿದ್ದಾರೆ**
ವೇಟರ್ಸ್, ಕ್ಯಾಪ್ಟನ್, ಕ್ಲೀನಿಂಗ್
ಆಕರ್ಷಕ ಸಂಬಳ ನೀಡಲಾಗುವುದು.
93809 74740

**ಮಳಿಗೆಗಳು ಬಾಡಿಗೆಗೆ ಇವೆ**
ಹರಿಹರದಲ್ಲಿ ಬಸ್ ಸ್ಟ್ಯಾಂಡ್‌ನ ಹತ್ತಿರ ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿ ಎಸ್.ಎಂ. ಲಾಡ್ಜ್ ಹತ್ತಿರ, ಮಳಿಗೆಗಳು (10x12 ಅಡಿ) ಬಾಡಿಗೆಗೆ ಇವೆ.
98444 33504

**2 BHK ಮನೆ ಬಾಡಿಗೆಗೆ ಇದೆ**
ನಂ. 600, 6ನೇ ಮೇನ್, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿರಿ :
93539 35985

**CHANGE OF NAME**
Sameena Taj (Old Name) W/O Mohammed Asif 1St Main, 3Rd Cross, Oppsite A.M. Shadhi Mahal, Bahar Makan Harihara, Davanagere (Dist) Have Changed My Name As HUSNA TAJ (New Name) Vide Affidavit Dated 30.12.2020 Sworn Befor Notary I.P. Brahmakumar, Davangere. Henceforth All My Transaction & Dealings Will Be In My New Name HUSNA TAJ
Sd/- HUSNA TAJ

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳಿಸುತ್ತೇವೆ. ಬಾಣಂತಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಕಳುಹಿಸುತ್ತೇವೆ. ಸೆಕ್ಯೂರಿಟಿ ಸರ್ವೀಸ್. ಈ ಎಲ್ಲಾ ಸೇವೆಗಳು ಬೇಕಾಗಿದ್ದಲ್ಲಿ ಸಂಪರ್ಕಿಸಿ.
9902464522, 9686455820
ಯುವಕ-ಯುವತಿಯರು ಬೇಕಾಗಿದ್ದಾರೆ.

**ಸಂಘ ಸಂಸ್ಥೆಗಳ, ಟ್ರಸ್ಟ್, GST ರಿಜಿಸ್ಟ್ರೇಷನ್ & ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**State Bank of India ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account Open)
# 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಶಾಪ್ & ವಾಸ್ತು ಮನೆ ಬಾಡಿಗೆಗೆ**
ಪೂರ್ವ ಮುಂಬಾಗಿಲಿನ, ಗ್ರೌಂಡ್ ಫ್ಲೋರ್ ಶಾಪ್ & 2 & 3 ಬೆಡ್ ರೂಂ, ಡೈನಿಂಗ್ ಹಾಲ್, ನೀರಿನ ಸೌಕರ್ಯ, ಪಾರ್ಕಿಂಗ್, ಮನೆ ಬಾಡಿಗೆಗೆ ಇದೆ. 8ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, # 408, ಸಮೃದ್ಧಿ ನಿಲಯ, ಪಿ.ಜೆ.ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ.
93807 97651
95386 41980

**ಮಾರ್ಕೆಟಿಂಗ್ ಮಾಡಲು ಯುವಕರು ಬೇಕಾಗಿದ್ದಾರೆ**
ಸಂಬಳ 10,000/- ದಿಂದ 15,000/-
ಫೋ. 08192-231951
231953

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

ಕೋವಿಡ್ ಬಗ್ಗೆ ನಿರ್ಲಕ್ಷ್ಯ ಬೇಡ,
ಮಾಸ್ಕ್ - ಸ್ಯಾನಿಟೈಸರ್ ಉಪಯೋಗ ಕಡ್ಡಾಯವಾಗಿರಲಿ

**ನ್ಯೂ M.G.S. ಜ್ಯುಯಲರ್ಸ್**
ಆನಂದ್ ಬುಕ್ ಡಿಪೋ ಎದುರು ಮಂಡಿಪೇಟೆ, ದಾವಣಗೆರೆ. ಫೋ: 231951
E Group 2nd Draw
1) ವಿಶೇಷ ಬಹುಮಾನ ನಂ. 21000/- 1
2) ಸಮಾಧಾನಕರ ಬಹುಮಾನ - 4

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
6ನೇ ಡ್ರಾ ನಂಬರ್
ನಂಬರ್ 171
SHMINDRA N. ACHAR
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**PWD & NAVODAYA COACHING**
New Batches Started
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**JOBS**
MCS ACADEMY
Training & Placement Cell
98444 92888

# ನಗರದ ವೀರೇಶ್ವರ ಪುಣ್ಯಾಶ್ರಮಕ್ಕೆ ಶ್ರೀಶೈಲ ಜಗದ್ಗುರುಗಳ ಭೇಟಿ



ದಾವಣಗೆರೆ, ಜ. 10 - ನಗರಕ್ಕೆ ಸಮೀಪದ ಬಾಡಾ ಕ್ರಾಸ್ ಬಳಿಯ ಶ್ರೀ ವೀರೇಶ್ವರ ಪುಣ್ಯಾಶ್ರಮಕ್ಕೆ ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ನಿನ್ನೆ ಭೇಟಿ ನೀಡಿದ್ದರು.

ಪುಣ್ಯಾಶ್ರಮದ ಆವರಣದಲ್ಲಿ ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಶಿಲಾ ಮಂಟಪವನ್ನು ಶ್ರೀಗಳು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ನಂತರ ಆಶ್ರಮದಲ್ಲಿರುವ ಶ್ರೀ ಪಂಚಾಕ್ಷರಿ ಗವಾಯಿಗಳ ಹಾಗೂ ಶ್ರೀ ಪುಟ್ಟರಾಜ ಗವಾಯಿಗಳ ಗದ್ದುಗೆಗಳಿಗೆ ತೆರಳಿ ನಮನ ಸಲ್ಲಿಸಿದರು.

ಆಶ್ರಮದ ವತಿಯಿಂದ ಜಗದ್ಗುರುಗಳಿಗೆ ಪಾದಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಜಗದ್ಗುರುಗಳು, ಅಂಧರ ಬಾಳಿಗೆ ಬೆಳಕಾಗಿದ್ದ ಪುಟ್ಟರಾಜ ಗವಾಯಿಗಳ ಜೀವನ ದರ್ಶನ ಮಾಡಿಸಿದರು.

ದಾವಣಗೆರೆಯಲ್ಲಿ ತಮ್ಮ ಪುರಪ್ರವೇಶದ ಮೆರವಣಿಗೆ ನಡೆಯುತ್ತಿರುವಾಗ, ಪುಟ್ಟರಾಜ ಗವಾಯಿಗಳು ಲಿಂಗೈಕ್ಯರಾದ ಸುದ್ದಿ ಬಂದಿತು, ತಕ್ಷಣ ತಾವು ಮೆರವಣಿಗೆಯ ರಥದಿಂದ ಕೆಳಗಿಳಿದು, ಪಾದಯಾತ್ರೆಯ ಮೂಲಕವೇ ಶ್ರೀಶೈಲ ಮಠಕ್ಕೆ ತೆರಳಿ, ಪುಟ್ಟರಾಜ ಗವಾಯಿಗಳಿಗೆ ತಾವು ಗೌರವ ಸೂಚಿಸಿದ್ದನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್ ಅವರು, ನಗರಪಾಲಿಕೆಯಿಂದ ಶಿಲಾಮಂಟಪದ ನಿರ್ಮಾಣಕ್ಕೆ ಅನುದಾನ ಕೊಡಿಸುವ ಭರವಸೆ ನೀಡಿದರು.

ಆಶ್ರಮದ ಅಂಧ ಮಕ್ಕಳು ಪ್ರಾರ್ಥಿಸಿದರು. ಆಶ್ರಮದ ಕಾರ್ಯದರ್ಶಿ ಎ. ಹೆಚ್. ಶಿವಮೂರ್ತಿಸ್ವಾಮಿ ಅವರು ಸ್ವಾಗತಿಸಿದರು. ಆಶ್ರಮದ ಅಧ್ಯಕ್ಷ ಅಥಣಿ ವೀರಣ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಆಶ್ರಮ ನಡೆದು ಬಂದ ದಾರಿಯನ್ನು ವಿವರಿಸಿದರು. ಕಾರ್ಯಕ್ರಮವನ್ನು ಶಿವಬಸಯ್ಯ ನಿರೂಪಿಸಿದರು. ಚನ್ನವೀರಯ್ಯ ವಂದಿಸಿದರು.

ಕಾರ್ಯಕ್ರಮದಲ್ಲಿ ಜೆ. ಎನ್. ಕರಿಬಸಪ್ಪ, ಪಂಚಾಕ್ಷರಿ, ಬಸವನಗೌಡ, ಕರಿಬಸಪ್ಪ, ಬಸವರಾಜ, ಸಿದ್ದಲಿಂಗೇಶ್, ಬಕ್ಕೇಶ್ ನಾಗನೂರು, ಬನ್ನಯ್ಯಸ್ವಾಮಿ, ಅಮರಯ್ಯ ಮತ್ತಿತರರು ಉಪಸ್ಥಿತರಿದ್ದರು.

# ಬುದ್ಧಿವಂತಿಕೆ, ಕರುಣೆ, ಕೌಶಲ್ಯಗಳನ್ನು ರೂಢಿಸಿಕೊಳ್ಳಿ



**ವಿದ್ಯಾರ್ಥಿಗಳಿಗೆ ಡಾ. ಎಂ.ಜಿ. ಈಶ್ವರಪ್ಪ ಕರೆ**

ದಾವಣಗೆರೆ, ಜ.11 – ಕೇವಲ ಪಠ್ಯದ ಅಧ್ಯಯನದಿಂದ ಶಿಕ್ಷಣದಲ್ಲಿ ಪೂರ್ಣ ಯಶಸ್ಸು ಸಿಗುವುದಿಲ್ಲ. ಓದಿನ ಜೊತೆಗೆ ಬುದ್ಧಿವಂತಿಕೆ, ಕರುಣೆ ಹಾಗೂ ಕೌಶಲ್ಯಗಳನ್ನೂ ರೂಢಿಸಿಕೊಳ್ಳಬೇಕು ಎಂದು ಜನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ ತಿಳಿಸಿದ್ದಾರೆ.

ಸ್ಥಳೀಯ ವಿದ್ಯಾನಗರ ಉದ್ಯಾನವನದ ಕಾವ್ಯ ಮಂಟಪದಲ್ಲಿ ಗ್ರಂಥಸರಸ್ವತಿ ಪ್ರತಿಭಾರಂಗದ ಆಶ್ರಯದಲ್ಲಿ ಇಂದು ಆಯೋಜಿಸಲಾಗಿದ್ದ ಕನ್ನಡ ನುಡಿಜಾಣ ಪ್ರತಿಭಾ ಪುರಸ್ಕಾರ ಪ್ರದಾನ, ಶತಮಾನದ ಕನ್ನಡ ಕಾವ್ಯ ವಾಚನ ನಿತ್ಯೋತ್ಸವ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನಿತರಾಗಿ ಅವರು ಮಾತನಾಡಿದರು.

ಸಾರ್ವತ್ರಿಕ ಶಿಕ್ಷಣದ ಕಾರಣದಿಂದಾಗಿ ಈಗ ಎಲ್ಲರೂ ಕಲಿತವರಾಗಿದ್ದೇವೆ. ಆದರೆ, ಜನಪದರಿಗೆ ಸಿಗುತ್ತಿದ್ದ ಜೀವನಾನುಭವ ಸಿಗುತ್ತಿಲ್ಲ. ಮಹಾತ್ಮ ಗಾಂಧೀಜಿ ಅವರು ಹೇಳಿರುವ ಹಾಗೆ ಬುದ್ಧಿ, ಕರುಣೆ ಹಾಗೂ ಕೌಶಲ್ಯಗಳನ್ನು ಒಳಗೊಂಡ ಶಿಕ್ಷಣ ನಮಗೆ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಆಶುಕವಿ ಯುಗಧರ್ಮ ರಾಮಣ್ಣ, ಇಂದು ಕೇವಲ ವಿದ್ಯಾವಂತರನ್ನು ಕಾಣುತ್ತಿದ್ದೇವೆ. ವಿದ್ಯಾವಂತರ ಜೊತೆಗೆ ಬುದ್ಧಿವಂತ, ಬಲವಂತ ಹಾಗೂ ಛಲವಂತರೂ ಆಗಬೇಕು. ಲೌಕಿಕದ ಜೊತೆಗೆ ಅಲೌಕಿಕ ಹಾಗೂ ಲೋಕಾನುಭವವನ್ನೂ ಹೊಂದಬೇಕು ಎಂದು ತಿಳಿಸಿದರು.

ಅಕ್ಷರದಿಂದ ಸಾಧನೆ ಹಾಗೂ ಸಾಕ್ಷಾತ್ಕಾರ ಎರಡೂ ಸಾಧ್ಯವಿದೆ. ಅಜ್ಞಾನದಿಂದ ಬ್ರಹ್ಮಜ್ಞಾನದ ಕಡೆಗೆ ಸಾಗಬೇಕಿದೆ ಎಂದ ಅವರು, ವಿದ್ಯಾರ್ಥಿಗಳು ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಭಿವೃದ್ಧಿ ಉಪ ನಿರ್ದೇಶಕ ಹೆಚ್.ಕೆ. ಲಿಂಗರಾಜು ಮಾತನಾಡಿ, ವಿದ್ಯಾರ್ಥಿಗಳು ಸಾಧನೆಯ ಕನಸು ಕಾಣುವ ಸಂಕಲ್ಪ ಮಾಡಬೇಕು. ಯಶಸ್ಸು ಎಂದರೆ ಒಂದು ಹಂತಕ್ಕೆ ಸಾಧನೆ ಮಾಡಿ ನಿಲ್ಲುವುದಲ್ಲ. ನಿರಂತರವಾಗಿ ಸಾಧಿಸುತ್ತಿರುವುದೇ ಯಶಸ್ಸು ಎಂದರು.

ಚಿಕ್ಕಮಗಳೂರಿನ ಬಸವ ಮಂದಿರದ ಶ್ರೀ ಡಾ. ಬಸವ ಮರುಳಸಿದ್ದ ಸ್ವಾಮೀಜಿ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ, ವಿದ್ಯೆ ಜೊತೆ ಬುದ್ಧಿ ಇದ್ದರೆ ಹೃದಯ ವಿಶಾಲವಾಗುತ್ತದೆ. ಯಾವುದೇ ವಿದ್ಯಾರ್ಥಿಯೂ ಕೀಳರಿಮೆ ಬೆಳೆಸಿಕೊಳ್ಳುವ ಅಗತ್ಯ ಇಲ್ಲ. ಬದುಕಿನಲ್ಲಿ ಸಾಧಿಸುವ ವಿಶ್ವಾಸ ಇದ್ದರೆ ಸೋಲೆಂದೂ ಎದುರಾಗುವುದಿಲ್ಲ ಎಂದರು.

ಗ್ರಂಥ ಸರಸ್ವತಿ ಪ್ರತಿಭಾರಂಗದ ಅಧ್ಯಕ್ಷ ಆರ್. ಶಿವಕುಮಾರ ಸ್ವಾಮಿ ಕುರ್ಕಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಯುಗಧರ್ಮ ರಾಮಣ್ಣ ಹಾಗೂ ಡಾ. ಎಂ. ಜಿ.ಈಶ್ವರಪ್ಪ ಅವರಿಗೆ ಸನ್ಮಾನಿಸಲಾಯಿತು. ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕನ್ನಡ ನುಡಿ ಜಾಣ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು.

## ನಾಳೆ ಕಾಳಿಕಾದೇವಿ ಕಡೇ ಕಾರ್ತಿಕ



ದಾವಣಗೆರೆ, ಜ.10- ನಗರದ ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಕಡೆ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 12 ರ ಮಂಗಳವಾರ ನಡೆಯಲಿದೆ.

ಅಂದು ಪ್ರಾತಃಕಾಲ ಶ್ರೀ ಅಮ್ಮನವರಿಗೆ ವೇದೋಕ್ತ ಪಂಚಾಮೃತ ಅಭಿಷೇಕ, ವಿಶ್ವಕರ್ಮ ಅಷ್ಟೋತ್ತರ ಪೂಜೆ, ಪುಷ್ಪಾಲಂಕಾರ, ವಿಶೇಷ ಪೂಜಾ ಅಲಂಕಾರ, ಮಹಾಮಂಗಳಾರತಿ ನಡೆಯುವುದು. ಅಂದು ರಾತ್ರಿ 8 ಗಂಟೆಗೆ ದೀಪಾರಾಧನೆ ಕಡೇ ಕಾರ್ತಿಕೋತ್ಸವ ಏರ್ಪಡಿಸಲಾಗಿದೆ ಎಂದು ಕಾರ್ಯದರ್ಶಿ ನಲ್ಕುಂದ ಕರಿಬಸಪ್ಪ ತಿಳಿಸಿದ್ದಾರೆ.

## ನಗರದಲ್ಲಿಂದು ಕುರಿ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆಯ ಉಚಿತ ತರಬೇತಿಯು ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದಲ್ಲಿ ಇಂದಿನಿಂದ ಮೂರು ದಿನ ನಡೆಯಲಿದೆ. ವಿವರಕ್ಕೆ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ (ದೂರವಾಣಿ 08192-233787) ವನ್ನು ಸಂಪರ್ಕಿಸಬಹುದು.

## ನಾಳೆ ಶ್ರೀ ಬನ್ನಿ ಮಹಾಂಕಾಳಿ ಕಾರ್ತಿಕ

ದಾವಣಗೆರೆ, ಜ.9- ಪಿ.ಜೆ. ಬಡಾವಣೆ 4ನೇ ಮೇನ್ 9ನೇ ಕ್ರಾಸ್ ಲ್ಲಿರುವ ವಿಶ್ವೇಶ್ವರಯ್ಯ ಪಾರ್ಕ್‌ನಲ್ಲಿರುವ ಶ್ರೀ ಬನ್ನಿ ಮಹಾಂಕಾಳಿ ದೇವಿ ಕಾರ್ತಿಕೋತ್ಸವ ಇದೇ ದಿನಾಂಕ 12 ರ ಮಂಗಳವಾರ ಸಂಜೆ ನಡೆಯಲಿದೆ.

# 3 ಮಣ್ಣು ಮುಕ್ಕ ಹಾವುಗಳ ವಶ



**ಮಾರಾಟ ಮಾಡುತ್ತಿದ್ದ ಐವರು ಆರೋಪಿಗಳ ಬಂಧನ**

ದಾವಣಗೆರೆ, ಜ.10- ಅಳಿವಿನಂಚಿನಲ್ಲಿರುವ ಎರಡು ತಲೆಯ ಮಣ್ಣು ಮುಕ್ಕ ಹಾವು ಗಳ ಮಾರಾಟ ತಂಡದ ಮೇಲೆ ದಾಳಿ ನಡೆಸಿರುವ ಪೊಲೀಸರು ಐವರನ್ನು ಬಂಧಿಸಿ 3 ಹಾವುಗಳನ್ನು ವಶಪಡಿಸಿಕೊಂಡಿದ್ದಾರೆ.

ಚಳ್ಳಕೆರೆ ತಾಲ್ಲೂಕು ಓಬೇನಹಳ್ಳಿ ಗ್ರಾಮದ ಗಣೇಶ್, ಐಟಿಐ ವಿದ್ಯಾರ್ಥಿ, ಚನ್ನಗಿರಿ ತಾಲ್ಲೂಕು ನಲ್ಲೂರು ಗ್ರಾಮದ ಅಭಿಲಾಷ್, ಹೂವಿನಹಡಗಲಿ ತಾಲ್ಲೂಕಿನ ಅಂಗುರು ಗ್ರಾಮದ ನಾಗರಾಜ ಮತ್ತು ಮುತ್ತಪ್ಪ ಹಾಗೂ ಚನ್ನಗಿರಿ ತಾಲ್ಲೂಕು ಗಾಣದಕಟ್ಟೆ ಗ್ರಾಮದ ಪ್ರಜ್ವಲ್ ಬಂಧಿತರು.

ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್, ಡಿಸಿಆರ್‌ಬಿ ವಿಭಾಗದ ಪೊಲೀಸ್ ಉಪಾಧಿಕ್ಷಕ ಬಿ. ಎಸ್. ಬಸವರಾಜ್ ಮಾರ್ಗದರ್ಶನದಲ್ಲಿ ದಾವಣಗೆರೆ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಬಿ.ವಿ. ಗಿರೀಶ್, ಸಿಬ್ಬಂದಿಗಳಾದ ಪಿ. ನಾಗರಾಜ, ವೈ.ಬಿ. ರವಿ, ಎಸ್. ಲೋಹಿತ್, ಬಿ. ನಾಗರಾಜ, ಎಸ್. ಗೋವಿಂದರಾಜ, ಮಲ್ಲಿಕಾರ್ಜುನ ಹಾದಿಮನಿ, ದ್ಯಾಮೇಶ್ ಒಳಗೊಂಡ ತಂಡವು ಉಪವಲಯ ಅರಣ್ಯಾಧಿಕಾರಿ ಹೆಚ್.ಎಸ್. ಚಂದ್ರಶೇಖರ್, ಅರಣ್ಯ ರಕ್ಷಕ ಬರ್ಕತ್ ಅಲಿ ಸಹಕಾರದಲ್ಲಿ ದಾಳಿ ಮಾಡಿದೆ.

ಹಾವುಗಳನ್ನು ಮುಂದಿನ ಕಾನೂನು ಕ್ರಮಕ್ಕಾಗಿ ಅರಣ್ಯ ಅಧಿಕಾರಿಗಳ ವಶಕ್ಕೆ ಒಪ್ಪಿಸಲಾಗಿದೆ.

# ಪಂಚಮಸಾಲಿ ಮಹಿಳಾ ಘಟಕದ 'ಸ್ನೇಹ ಕೂಟ'



ದಾವಣಗೆರೆ, ಜ.10- ನಗರದ ವೀರಶೈವ ಪಂಚಮಸಾಲಿ ಮಹಿಳಾ ಘಟಕದ 'ಸ್ನೇಹ ಕೂಟ'ದ ಸದಸ್ಯೆಯರಿಂದ ಹೊಸ ವರುಷ 2021 ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗದ ಸದಸ್ಯರಾದ ಶ್ರೀಮತಿ ಜ್ಯೋತಿ ರಾಧೇಶ್ ಜಂಬಗಿ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಸದಸ್ಯೆಯರಿಗಾಗಿ ಆಟಗಳನ್ನು ಆಯೋಜಿಸಲಾಗಿತ್ತು. ಪಂಚಮಸಾಲಿಯ ಸದಸ್ಯರುಗಳಾದ ಶಶಿಕಲಾ ಶಿವಲಿಂಗಪ್ಪ, ಕೊಟ್ರಮ್ಮ ಮುರುಗೇಶ್, ಕುಸುಮಾ, ವಾಣಿ ರಶ್ಮಿ, ವೀಣಾ, ವಸಂತ, ಮಮತಾ, ರತ್ನಮ್ಮ, ಮಂಜುಳಾ ಮುರಿಗೆಮ್ಮ, ದೇವೀರಮ್ಮ, ದ್ರಾಕ್ಷಾಯಣಿ ಮತ್ತಿತರರು ಭಾಗವಹಿಸಿದ್ದರು.


## ರಾಜನಹಳ್ಳಿಯಲ್ಲಿ ಇಂದು ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆ

ಹರಿಹರ ತಾಲ್ಲೂಕು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಆವರಣದಲ್ಲಿ ಫೆ 8 ಮತ್ತು 9 ರಂದು ನಡೆಯುವ ಮೂರನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮಿಗಳವರ ಸಾನಿಧ್ಯದಲ್ಲಿ ಆಯೋಜಿಸಲಾಗಿದೆ. ಜಾತ್ರಾ ಸಮಿತಿಯ ಅಧ್ಯಕ್ಷ ಮತ್ತು ರಾಜ್ಯ ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಆಡಳಿತಾಧಿಕಾರಿ ಟಿ. ಓಬಳಪ್ಪ ತಿಳಿಸಿದ್ದಾರೆ.

## ನಾಳೆ ಪಾಲಿಕೆಯ ಆಯ-ವ್ಯಯ ತಯಾರಿಕಾ ಪೂರ್ವಭಾವಿ ಸಭೆ

ದಾವಣಗೆರೆ, ಜ.10- ಮಹಾನಗರ ಪಾಲಿಕೆ 2021-22 ನೇ ಸಾಲಿನ ಆಯ-ವ್ಯಯವನ್ನು ತಯಾರಿಸಲು ಸಂಘ-ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯುವ ಉದ್ದೇಶದಿಂದ ಜ.12 ರ ಸಂಜೆ 4 ಗಂಟೆಗೆ ಪಾಲಿಕೆ ಕೌನ್ಸಿಲ್ ಸಭಾಂಗಣದಲ್ಲಿ ಮಹಾಪೌರರ ಅಧ್ಯಕ್ಷತೆಯಲ್ಲಿ ಮೊದಲನೇ ಸಭೆ ನಡೆಯಲಿದೆ ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

## ಹಿರಿಯ ಪತ್ರಕರ್ತರ ಸಂಘಕ್ಕೆ ಆಯ್ಕೆ





ದಾವಣಗೆರೆ,ಜ.10- ಜಿಲ್ಲೆಯಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತರಲಾಗಿರುವ ಹಿರಿಯ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷರಾಗಿ ಬಕ್ಕೇಶ್ ನಾಗನೂರು ಮತ್ತು ಖಜಾಂಚಿಯಾಗಿ ಪಿ. ಸೀತಾರಾಂ ಆಯ್ಕೆಯಾಗಿದ್ದಾರೆ.

# ನಗರದಲ್ಲಿ ವಾಸವಿರದ ವಿಧಾನ ಪರಿಷತ್ ಸದಸ್ಯರುಗಳನ್ನು ಕೈಬಿಡಲು ಒತ್ತಾಯ



**ಮೇಯರ್-ಉಪ ಮೇಯರ್ ಚುನಾವಣೆ :**

ದಾವಣಗೆರೆ, ಜ.10- ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ನಡೆದ ಸಭೆಯ ನಂತರ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಅವರ ನೇತೃತ್ವದಲ್ಲಿ ಜಿಲ್ಲಾ ಚುನಾವಣಾ ವೀಕ್ಷಕ ಉಮಾಶಂಕರ್ ಅವರಿಗೆ ಕಳೆದ ಮೇಯರ್ – ಉಪಮೇಯರ್ ಚುನಾವಣೆಯಲ್ಲಿ ನಗರದಲ್ಲಿ ವಾಸವಿಲ್ಲದ ವಿಧಾನಪರಿಷತ್ ಸದಸ್ಯರನ್ನು ಮತದಾರರ ಪಟ್ಟಿಯಿಂದ ಕೈಬಿಡಬೇಕೆಂದು ಒತ್ತಾಯಿಸಿದ್ದಾರೆ.

ಈಗಾಗಲೇ ಕಾಂಗ್ರೆಸ್ ಪಕ್ಷದ ಬಿಎಲ್‌ಎಗಳು ಆ ಭಾಗದ ಬಿಎಲ್‌ಓಗಳಿಗೆ ಫಾರಂ-7 ನೀಡಿದ್ದು, ಬಿಎಲ್‌ಓ ಮತ್ತು ಬಿಎಲ್‌ಎ ಪರಿಷತ್ ಸದಸ್ಯರ ವಿಳಾಸದಲ್ಲಿ ಪರಿಶೀಲನೆ ನಡೆಸಿ ಅಕ್ಕಪಕ್ಕದ ಮನೆಯವರ ಬಳಿ ಮಾಹಿತಿ ಪಡೆದು ಸ್ಥಳದಲ್ಲಿ ವಾಸ ಇರುವುದಿಲ್ಲ ಎಂದು ಇಆರ್‌ಓ ಸಲ್ಲಿಸಿರುತ್ತಾರೆ. ಆದಾಗ್ಯೂ ಇಆರ್‌ಓ ಈ ಬಗ್ಗೆ ಕ್ರಮ ತೆಗೆದುಕೊಂಡಿರುವುದಿಲ್ಲ. ಮುಂಬರುವ ಮೇಯರ್ – ಉಪಮೇಯರ್ ಚುನಾವಣೆಗೆ ದಾವಣಗೆರೆ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸವಿಲ್ಲದ ಪರಿಷತ್ ಸದಸ್ಯರ ಹೆಸರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಹುನ್ನಾರ ನಡೆಯುತ್ತಿದ್ದು, ಇದನ್ನು ಸ್ಥಳ ಪರಿಶೀಲನೆ ಮಾಡಿ ಹೊಸದಾಗಿ ಸೇರ್ಪಡೆ ಮಾಡದಂತೆ ಸೂಕ್ತ ಕ್ರಮ ವಹಿಸಬೇಕಾಗಿ ಉಮಾಶಂಕರ್ ಅವರಲ್ಲಿ ಮನವಿಯನ್ನು ಸಲ್ಲಿಸಲಾಯಿತು.

ಎಸ್.ಆರ್. ಉಮಾಶಂಕರ್ ಮಹಾನಗರ ಪಾಲಿಕೆ ಕಾಂಗ್ರೆಸ್ ಪಕ್ಷದ ಸದಸ್ಯರ ಮನವಿಗೆ ಸ್ಪಂದಿಸಿ ದಾಖಲೆಗಳನ್ನು ಪರಿಶೀಲಿಸುತ್ತೇನೆ ಎಂದು ತಿಳಿಸಿದಾಗ ವಿಪಕ್ಷ ಸದಸ್ಯರು ಬೋಗಸ್ ದಾಖಲೆ ನೀಡಿದ್ದು, ಸ್ಥಳ ಪರಿಶೀಲನೆ ಮಾಡಬೇಕೆಂದು ಮನವಿ ಮಾಡಿದರು.

ನಾಗರಾಜ್ ಅವರೊಂದಿಗೆ ಪಾಲಿಕೆ ಸದಸ್ಯ ಸೈಯದ್ ಚಾರ್ಲಿ, ಮುಖಂಡರಾದ ಗಣೇಶ್ ಹುಲ್ಮನಿ, ಉಮೇಶ್ ಹಾಜರಿದ್ದರು.

## ನಗರದಲ್ಲಿ ಇಂದು ಮಲ್ಲಿಕಾರ್ಜುನ, ಕಂಠಿ ದುರ್ಗಮ್ಮ ದೇವಸ್ಥಾನದಲ್ಲಿ ಕಾರ್ತಿಕ

ಶ್ರೀ ಗಾಂಧೀಜಿ ಹರಿಜನ ಯುವಕ ಸಂಘದ ಆಶ್ರಯದಲ್ಲಿ ಕೆಟಿಜೆ ನಗರ 10ನೇ ತಿರುವಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಕಂಠಿ ದುರ್ಗಮ್ಮ ದೇವಸ್ಥಾನದ ಕಾರ್ತಿಕೋತ್ಸವ ಇಂದು ಮತ್ತು ನಾಳೆ ಸಂಜೆ 7.30 ಕ್ಕೆ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ದೇವರುಗಳಿಗೆ ವಿಶೇಷ ಪೂಜೆಯೊಂದಿಗೆ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ತಿಳಿಸಿದ್ದಾರೆ.

## ನಗರಕ್ಕೆ ಇಂದು ಗೃಹ ಸಚಿವ ಬೊಮ್ಮಾಯಿ

ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 4 ಗಂಟೆಗೆ ಆಯೋಜಿಸಿರುವ 'ಜನಸೇವಕ ಸಮಾವೇಶ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಇಂದು ನಗರದಲ್ಲಿಯೇ ವಾಸ್ತವ್ಯ ಮಾಡುವರು.


## ಸಾರ್ವಜನಿಕ ಪ್ರಕಟಣೆ

**ಶ್ರೀ ಮಂಜುನಾಥ ಟಿ. ಬಿನ್ ತಿಪ್ಪೇಸ್ವಾಮಿ ವಾಸ # 91/99/545, ಡಿಸಿಎಂ ಟೌನ್ ಶಿಪ್ ದಾವಣಗೆರೆ** ಇವರು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ

ಈ ಕೆಳಕಂಡ ಷೆಡ್ಯೂಲ್ ಆಸ್ತಿಯ ಮಾಲೀಕರಾದ ಕೆ.ಟಿ.ಜೆ. ನಗರ ವಾಸಿ **ಶ್ರೀ ಕೆ. ವೆಂಕಟರಮಣ ರೆಡ್ಡಿ ಬಿನ್ ಶ್ರೀ ಲೇ. ಶಿವಾರೆಡ್ಡಿ** ಇವರಿಂದ ಸೈಟನ್ನು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಸದರಿ ಷೆಡ್ಯೂಲ್ ಆಸ್ತಿ ಬಗ್ಗೆ ಸಾರ್ವಜನಿಕರು ಯಾರೇ ಆಗಲಿ ತಂಟೆ ತಕಾರರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ (ಒಂದು ವಾರ) 7 ದಿನದೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ಈ ಕೆಳಕಂಡ ವ್ಯಕ್ತಿಗಳನ್ನು ಸಂಪರ್ಕಿಸ ತಕ್ಕದ್ದು ಒಂದು ವಾರದೊಳಗಾಗಿ ಯಾವುದೇ ರೀತಿಯ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಆಸ್ತಿ ಬಗ್ಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ನಮ್ಮ ಹೆಸರಿಗೆ ನೋಂದಾಯಿಸಿ ಕೊಳ್ಳಲು ಹಕ್ಕುವುಳ್ಳವರಾಗಿರುತ್ತೇವೆ.

**ಷೆಡ್ಯೂಲ್** : ದಾವಣಗೆರೆ ಮಹಾನಗರ ಪಾಲಿಕೆಗೆ ಸೇರಿದ ವಾರ್ಡ್ ನಂ. 25, ಡಿ.ಸಿ.ಎಂ ಟೌನ್ ಶಿಫ್‌ನಲ್ಲಿರುವ ಸೈಟ್ ನಂ -550 ಡೋರ್ ನಂ.91-99-550, ಅಳತೆ 40x39 ಇರುತ್ತದೆ. ಚೆಕ್ಕುಬಂದಿ **-ಪೂರ್ವಕ್ಕೆ - ಸೈಟ್‌ನಂ 551, ಪಶ್ಚಿಮಕ್ಕೆ - ರಸ್ತೆ ಉತ್ತರಕ್ಕೆ -ರಸ್ತೆ, ದಕ್ಷಿಣಕ್ಕೆ-ಸೈಟ್ ನಂ - 549**

ಸಹಿ/-

**ತಿಪ್ಪೇಸ್ವಾಮಿ - 99725 53570 , ಮೋಹನ್ ದೀಕ್ಷಿತ್ - 94496 29450**


# ನಗರದ ವಕೀಲರ ಸಂಘದ ಚುನಾವಣೆ ಅಧ್ಯಕ್ಷ ಸ್ಥಾನಕ್ಕೆ ಐವರ ನಡುವೆ ಪೈಪೋಟಿ

ದಾವಣಗೆರೆ,ಜ.10- ದಾವಣಗೆರೆ ವಕೀಲರ ಸಂಘದ ಚುನಾವಣೆಯು ಇದೇ ದಿನಾಂಕ 16ರಂದು ನಡೆಯಲಿದ್ದು, ಅಧ್ಯಕ್ಷ ಸ್ಥಾನಕ್ಕೆ ಐವರ ನಡುವೆ ಪೈಪೋಟಿ ನಡೆದಿದೆ. ಈ ಸಂಘದ ಅಧ್ಯಕ್ಷರಾಗಿ ಈಗಾಗಲೇ ಸೇವೆ ಸಲ್ಲಿಸಿರುವ ಡಿ.ಪಿ. ಬಸವರಾಜ್, ಟಿ.ಹೆಚ್. ಸಿದ್ದಪ್ಪ ಲೋಕಿಕೆರೆ, ವಿ. ತಿಮ್ಮೇಶಿ ಅವರುಗಳು ಮತ್ತೊಂದು ಅವಧಿಗೆ ಆಯ್ಕೆ ಬಯಸಿದ್ದಾರೆ. ಅವರೊಂದಿಗೆ ಪಂಚಪ್ಪ ಯಲ್ಲಪ್ಪ ಹಾದಿಮನಿ ಅವರಲ್ಲದೇ, ಕಳೆದ ಬಾರಿಯ ಚುನಾವಣೆಯಲ್ಲಿ ಪರಾಭವಗೊಂಡಿದ್ದ ತಿಮ್ಮಲಾಪುರದ ರವಿಶಂಕರ್ ಸ್ಪರ್ಧಿಸಿದ್ದಾರೆ.

ಒಂದು ಉಪಾಧ್ಯಕ್ಷ ಸ್ಥಾನಕ್ಕೂ ಐವರು ಸ್ಪರ್ಧಿಸಿದ್ದಾರೆ. ಶ್ರೀಮತಿ ಅಮೀರಾ ಬಾನು, ಬಿ.ಜಿ. ಚಂದ್ರಶೇಖರಪ್ಪ, ಬಿ.ಬಿ. ರಾಮಪ್ಪ, ಜಿ.ಎಸ್. ರಂಗನಾಥ್, ಕೆ.ಸಿ.ರೇವಣಸಿದ್ದಪ್ಪ ಅವರುಗಳು ಸ್ಪರ್ಧಾ ಕಣದಲ್ಲಿದ್ದಾರೆ.

ಕಾರ್ಯದರ್ಶಿ ಸ್ಥಾನವೂ ಒಬ್ಬರಿಗೆ ಅವಕಾಶ ಇದ್ದು, ಈ ಸ್ಥಾನಕ್ಕೆ ಎಸ್. ಮಂಜು ಮತ್ತು ಎಲ್.ಹೆಚ್. ಪ್ರದೀಪ್ ಅವರ ನಡುವೆ ನೇರ ಪೈಪೋಟಿ ನಡೆದಿದೆ. ಸಹ ಕಾರ್ಯದರ್ಶಿ ಸ್ಥಾನವೂ ಒಬ್ಬರಿಗೆ ಅವಕಾಶ ಇದ್ದು, ಇಲ್ಲೂ ಜಿ.ಕೆ. ಬಸವರಾಜ್ ಮತ್ತು ಎ.ಎಸ್. ಮಂಜುನಾಥ ಅವರ ನಡುವೆ ನೇರ ಸ್ಪರ್ಧೆ ಇದೆ.

ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಗಳು ಒಂಭತ್ತು ಇದ್ದು, 11 ಜನರು ಸ್ಪರ್ಧಿಸಿದ್ದಾರೆ. ಕೆ. ಅಣ್ಣಪ್ಪ, ಬಿ. ಚಂದ್ರಪ್ಪ, ಚಂದ್ರಶೇಖರ ಪಟ್ಟಣಶೆಟ್ಟಿ, ಚಂದ್ರಶೇಖರ ಜೆ. ರಾಥೋಡ್, ಎ.ಹೆಚ್. ಕಿರಣ್, ಬಿ. ಖಲೀಲ್, ಕೆ.ಎಸ್.ಸಂತೋಷ್ ನಾಯಕ್, ಎನ್. ಸಿದ್ದೇಶ್, ಬಿ.ವಿಶ್ವನಾಥ್ ಅವರುಗಳೊಂದಿಗೆ ಮಹಿಳಾ ಮೀಸಲು ಸ್ಥಾನಕ್ಕೆ ಶ್ರೀಮತಿ ಆರ್. ಭಾರತಿ, ಶ್ರೀಮತಿ ಕೆ. ಮಂಜುಳಾ ಸ್ಪರ್ಧೆ ಮಾಡಿದ್ದಾರೆ.

ವಕೀಲರ ಸಂಘದ ಚುನಾವಣೆಯಲ್ಲಿ ಎರಡು ಬಾರಿ ಚುನಾವಣಾಧಿಕಾರಿಯಾಗಿದ್ದ ಹಿರಿಯ ನ್ಯಾಯವಾದಿ ಎಲ್. ದಯಾನಂದ್ ಅವರು ಈ ಬಾರಿಯ ಚುನಾವಣೆಗೂ ಚುನಾವಣಾಧಿಕಾರಿಯಾಗಿದ್ದಾರೆ.

## ಉದ್ಯಮಶೀಲತಾ ಕೌಶಲ್ಯಾಭಿವೃದ್ಧಿ ತರಬೇತಿ

ದಾವಣಗೆರೆ, ಜ.8- ಜಿಲ್ಲೆಯ ಸಿಡಾಕ್- ಉದ್ಯಮಶೀಲತಾ ಮಾರ್ಗದರ್ಶನ ಕೇಂದ್ರದಿಂದ ಸ್ವಂತ ಉದ್ಯಮ ಪ್ರಾರಂಭಿಸಿ, ಸ್ವಾವಲಂಬಿಗಳಾಗಲು ಇಚ್ಛಿಸುವ ಜಿಲ್ಲೆಯ ಪುರುಷ, ಉದ್ಯಮಾಕಾಂಕ್ಷಿಗಳಿಗೆ 30 ದಿನಗಳ (ವಸತಿ ರಹಿತ) ಮೊಬೈಲ್ ಹ್ಯಾಂಡ್‌ಸೆಟ್ ರಿಪೇರಿ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಉದ್ಯಮಶೀಲತಾ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ದಾವಣಗೆರೆಯಲ್ಲಿ ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ನಡೆಸಲಾಗುವುದು. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಇತರೆ ವಿವರಗಳಿಗಾಗಿ ಸವಿತ, ಸಿಡಾಕ್ ತರಬೇತುದಾರರು ಮೊ: 9035229821 ಸಂಪರ್ಕಿಸುವುದು. ಅರ್ಜಿ ಸಲ್ಲಿಸಲು ಫೆಬ್ರವರಿ 1 ಕೊನೆಯ ದಿನವಾಗಿದೆ.

## ಡಾ. ಮಂಜಪ್ಪ ಅವರಿಗೆ 'ವಿಜ್ಞಾನ ಅಕಾಡೆಮಿ' ಪ್ರಶಸ್ತಿ



ದಾವಣಗೆರೆ, ಜ.10- ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಸಂಶೋಧನೆ, ಸಲಹಾ ನಿರ್ದೇಶಕರಾಗಿರುವ ಡಾ. ಎಸ್.ಮಂಜಪ್ಪ ಅವರಿಗೆ ನವದೆಹಲಿಯ ರಾಷ್ಟ್ರೀಯ ಪರಿಸರ ವಿಜ್ಞಾನ ಅಕಾಡೆಮಿಯ 'ಗೌರವ ಫೆಲೋಷಿಪ್ ಪ್ರಶಸ್ತಿ' ಲಭಿಸಿದೆ.

'ನೀರು, ತ್ಯಾಜ್ಯ ನೀರು ನಿರ್ವಹಣೆ, ಸಂಸ್ಕರಣೆ, ಮರುಬಳಕೆ ಹಾಗೂ ಪರಿಸರ ಅಧ್ಯಯನ' ವಿಚಾರಗಳಲ್ಲಿನ ಪ್ರಾಮಾಣಿಕ ಹಾಗೂ ಸಮರ್ಪಿತ ಕೊಡುಗೆ ಮತ್ತು ಸಾಧನೆಗಾಗಿ ನೀಡಲಾಗುವ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಇದೇ ತಿಂಗಳ 29 ರಂದು ನವದೆಹಲಿಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ನಡೆಯಲಿರುವ ರಾಷ್ಟ್ರೀಯ ಪರಿಸರ ವಿಜ್ಞಾನ ಅಕಾಡೆಮಿಯ ವಾರ್ಷಿಕ ಸಮಾವೇಶದಲ್ಲಿ ನೀಡಲಾಗುವುದು ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ಪರಿಸರ ವಿಜ್ಞಾನ ಅಕಾಡೆಮಿಯ 'ಗೌರವ ಫೆಲೋಶಿಪ್ ಪ್ರಶಸ್ತಿಗೆ ಭಾಜನರಾಗಿರುವ ಡಾ. ಮಂಜಪ್ಪ ಅವರಿಗೆ ಹಿರಿಯ ಪತ್ರಕರ್ತ ಹೆಚ್. ಎಂ.ಮಂಜುನಾಥ್, ಬಿಐಇಟಿ ಕಾಲೇಜಿನ ವಿದ್ಯಾರ್ಥಿ ನಿಲಯದ ರುದ್ರಪ್ಪ ಅಭಿನಂದಿಸಿದ್ದಾರೆ.

## ಗಂಗನರಸಿಯಲ್ಲಿ ಇಂದು ಕಡೇ ಕಾರ್ತಿಕೋತ್ಸವ

ಹರಿಹರ ತಾಲ್ಲೂಕಿನ ಶ್ರೀ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹಾಗೂ ಹನುಮಂತದೇವರ ಕಡೆ ಕಾರ್ತಿಕೋತ್ಸವ ಇಂದು ಸಂಜೆ 6.30 ಕ್ಕೆ ನಡೆಯಲಿದೆ ಎಂದು ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.


KSS Foundation (R.) Davanagere.

**ಕೆಎಸ್ಎಸ್ ಆಂಗ್ಲ ಮಾಧ್ಯಮ (ವಸತಿಯುತ) ಶಾಲೆ**

# 1382/5, 6, 'ಮಾತೃ ಕೃಪ' 2ನೇ ಕ್ರಾಸ್, ಸರಸ್ವತಿ ನಗರ, ದಾವಣಗೆರೆ - 577 004.

ಪೋನ್ ನಂ. : 9008487807, 9035110629, 9880127276, 08192-262904, 9845781788

**ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಬೇಕಾಗಿದ್ದಾರೆ**

ದಿನಾಂಕ 10.01.2021ರಂದು 'ಜನತಾವಾಣಿ' ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ನಮ್ಮ ಶಾಲೆಯ ಜಾಹೀರಾತು ಪ್ರಕಟಣೆಗೆ ಸಂಬಂಧಿಸಿದಂತೆ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಈ ಪ್ರಕಟಣೆಯ ದಿನಾಂಕದಿಂದ 7 ದಿನದೊಳಗಾಗಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಅಥವಾ ಖುದ್ದಾಗಿ ಸಂಪರ್ಕಿಸಬಹುದು.

ಹೆಚ್.ಕೆ. ಬಸವರಾಜ್, MBA-Em. ಕಾರ್ಯದರ್ಶಿಗಳು

ಬಿ. ವಿಕಾಸ್, BE, BBM ವ್ಯವಸ್ಥಾಪಕ ನಿರ್ದೇಶಕರು

ಸಿ.ಹೆಚ್. ಹಿರೇಗೌಡರ್, B.Sc. LL.B. ಆಡಳಿತ ಸಲಹೆಗಾರರು



## ಹೃತ್ಪೂರ್ವಕ ಅಭಿನಂದನೆಗಳು



ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಹೆಚ್‌ಡಿ ಪದವಿ ಪಡೆದಿರುವ ದಾವಣಗೆರೆ ಬಿಐಇಟಿ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕರಾದ

**ಶ್ರೀ ಸಿ.ಎಸ್. ವಿಜಯ್‌ಕುಮಾರ್**

ಇವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

**ಶುಭ ಕೋರುವವರು**

♦ ಶ್್ರೀಮತಿ ಲಲಿತಮ್ಮ ಶ್ರೀ ಯರಗುಂಟೆ ಮಂಜಣ್ಣ
♦ ಶ್ರೀಮತಿ ಲೀಲಮ್ಮ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು
♦ ಶ್ರೀಮತಿ ಆಶಾ ಶ್ರೀ ಬಿ.ಎಂ. ಬಸವರಾಜ್
♦ ಶ್ರೀಮತಿ ರೂಪಾ ಶ್ರೀ ಬಿ.ಎಂ. ಉಮೇಶ್
♦ ಅಪೇಕ್ಷಾ ♦ ಅಂಕಿತಾ ♦ ಸಂಕೇತ್ ♦ ಸಾತ್ವಿಕ್

# ಎಸ್ಸೆಸ್ ಅವರಿಗೆ ಲಯನ್ಸ್ ಕ್ಲಬ್ಬಿನ ಗೌರವ ಸದಸ್ಯತ್ವ



ದಾವಣಗೆರೆ,ಜ.10- ಪ್ರತಿಷ್ಠಿತ ಸಾಮಾಜಿಕ ಸೇವಾ ಸಂಸ್ಥೆ ದಾವಣಗೆರೆ ಲಯನ್ಸ್ ಕ್ಲಬ್ಬಿನ ಗೌರವ ಸದಸ್ಯರನ್ನಾಗಿ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಐವತ್ತೆರಡು ವರ್ಷಾಚರಣೆಯಲ್ಲಿರುವ ದಾವಣಗೆರೆ ಲಯನ್ಸ್ ಕ್ಲಬ್ಬಿನ ಕಾರ್ಯ ನಿರ್ವಾಹಕ ಸಭೆಯಲ್ಲಿ ತೀರ್ಮಾನ ಕೈಗೊಂಡಂತೆ, ಸ್ಥಾಪಕ ಸದಸ್ಯರಾಗಿ, ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಎಸ್ಸೆಸ್ ಅವರಿಗೆ ಗೌರವ ಸದಸ್ಯತ್ವ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಎಸ್ಸೆಸ್ ಅವರ ನಿವಾಸಕ್ಕೆ ಭೇಟಿ ನೀಡಿದ್ದ ಜಿಲ್ಲಾ ಲಯನ್ಸ್ 317 ಸಿ ರಾಜ್ಯಪಾಲ ಎನ್.ಎಂ. ಹೆಗಡೆ ಅವರು ಶಿವಶಂಕರಪ್ಪ ಅವರಿಗೆ ಸಂಸ್ಥೆಯ ವಿಶೇಷ ಪದಕ ಮತ್ತು ಪ್ರಮಾಣ ಪತ್ರವನ್ನು ನೀಡುವುದರ ಮೂಲಕ ಗೌರವ ಸದಸ್ಯರನ್ನಾಗಿ ಲಯನ್ಸ್ ಕ್ಲಬ್ಬಿಗೆ ಬರ ಮಾಡಿಕೊಂಡರು.

ಲಯನ್ಸ್ ಕ್ಲಬ್ಬಿನ ಗೌರವ ಸದಸ್ಯತ್ವ ಪಡೆದ ಎಸ್ಸೆಸ್, 52 ವರ್ಷಗಳ ಹಿಂದೆ ತಾವು ತಮ್ಮ ಮಿತ್ರರೊಂದಿಗೆ ಸೇರಿ ಲಯನ್ಸ್ ಕ್ಲಬ್ಬನ್ನು ದಾವಣಗೆರೆಯಲ್ಲಿ ಸ್ಥಾಪಿಸಿದ್ದನ್ನು ಮೆಲುಕು ಹಾಕಿದರಲ್ಲದೇ, ಅಂದಿನ ಪದಾಧಿಕಾರಿಗಳು ಮತ್ತು ನಡೆಸಿದ ಸಾಮಾಜಿಕ ಸೇವೆಗಳನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರೂ, ದಾವಣಗೆರೆ ಲಯನ್ಸ್ ಟ್ರಸ್ಟ್ ಛೇರ್ಮನ್ನರೂ ಆಗಿರುವ ಹಿರಿಯ ವೈದ್ಯ ಡಾ. ಬಿ.ಎಸ್. ನಾಗಪ್ರಕಾಶ್, ಸಾಮಾಜಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಗಣ್ಯರೊಬ್ಬರಿಗೆ ಲಯನ್ಸ್ ಸಂಸ್ಥೆಯಲ್ಲಿ ಗೌರವ ಸದಸ್ಯತ್ವ ನೀಡುವುದರ ಮೂಲಕ ಅವರಿಗೆ ಗೌರವ ನೀಡುವ ಪ್ರತೀತಿ ಇದ್ದು, ಈ ಹಿನ್ನೆಲೆಯಲ್ಲಿ ಎಸ್ಸೆಸ್ ಅವರಿಗೆ ಆ ಗೌರವ ನೀಡಿರುವುದಾಗಿ ತಿಳಿಸಿದರು.

ಹಿರಿಯ ನೇತ್ರ ತಜ್ಞರಾಗಿದ್ದ ಡಾ. ಎಂ.ಸಿ. ಮೋದಿ ಅವರು ಈವರೆಗೂ ದಾವಣಗೆರೆ ಲಯನ್ಸ್ ಕ್ಲಬ್ಬಿನಲ್ಲಿ ಗೌರವ ಸದಸ್ಯರಾಗಿದ್ದರು. ಅವರ ನಿಧನದಿಂದಾಗಿ ಕೆಲ ವರ್ಷಗಳಿಂದ ತೆರವಾದ ಸ್ಥಾನಕ್ಕೆ ಎಸ್ಸೆಸ್ ಅವರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಡಾ. ನಾಗಪ್ರಕಾಶ್ ಹೇಳಿದರು.

ಲಯನ್ಸ್ ಕ್ಲಬ್ ಇರುವ ಊರುಗಳಲ್ಲಿ ಆಯಾ ಭಾಗದ ಗಣ್ಯರೊಬ್ಬರಿಗೆ ಗೌರವ ಸದಸ್ಯತ್ವ ನೀಡಲಾಗುತ್ತಿದೆ. ಅದರಂತೆ, ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆ, ಕ್ರಿಕೆಟ್ ತಾರೆಗಳಾದ ರವಿ ಶಾಸ್ತ್ರಿ, ಅನಿಲ್ ಕುಂಬ್ಳೆ, ವೆಂಕಟೇಶ್ ಪ್ರಸಾದ್ ಮತ್ತಿತರೆ ಗಣ್ಯರಿಗೆ ಲಯನ್ಸ್ ನ ಗೌರವ ಸದಸ್ಯತ್ವ ನೀಡಲಾಗಿದೆ ಎಂದು ಅವರು ವಿವರಿಸಿದರು.


ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಎಂ. ವಿಜಯಕುಮಾರ್, ಕಾರ್ಯದರ್ಶಿ ಕೋರಿ ಶಿವಕುಮಾರ್, ಖಜಾಂಚಿ ಸಂಪತ್ ಬಿ. ಹಳ್ಳಿಕೇರಿ, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್, ಛೇರ್ಮನ್ ದಿನೇಶ್ ಕೆ.ಶೆಟ್ಟಿ, ನಿರ್ದೇಶಕ ಎಂ.ಎಸ್. ಉದಯಕುಮಾರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಾಳೆ ಭೋಳಚಟ್ಟಿ ಚೌಡೇಶ್ವರಿ -ಕಾಲಭೈರವ ಭೂತಪ್ಪ ಕಾರ್ತಿಕ



ದಾವಣಗೆರೆ, ಜ.10- ನಗರದ ವೀರಶೈವ ರುದ್ರಭೂಮಿ ಎದುರಿನ ಭೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ ಹಾಗೂ ಕಾಲಭೈರವ ಭೂತಪ್ಪ ಸ್ವಾಮಿಯ ಕಡೇ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 12ರ ಮಂಗಳವಾರ ಜರುಗಲಿದೆ. ರಾತ್ರಿ 8.30ಕ್ಕೆ ಮಹಾ ಮಂಗಳಾರತಿ ನಡೆಯಲಿದೆ ಎಂದು ದೇವಸ್ಥಾನ ಸೇವಾ ಸಮಿತಿ ಕಾರ್ಯದರ್ಶಿ ಕೆ. ಸಂತೋಷ್‌ಕುಮಾರ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಮಡಿವಾಳ ಮಾಚಿದೇವರ ಕಾರ್ತಿಕೋತ್ಸವ



ವಿನೋಬ ನಗರದ 1ನೇ ಮುಖ್ಯರಸ್ತೆ 17ನೇ ತಿರುವಿನಲ್ಲಿರುವ ಶ್ರೀ ಮಡಿವಾಳ ಮಾಚೀದೇವರ ದೇವಸ್ಥಾನದಲ್ಲಿ ಶ್ರೀ ಸ್ವಾಮಿ ಕಡೇ ಕಾರ್ತಿಕ ಮಹೋತ್ಸವ ಇಂದು ಸಂಜೆ 7 ಕ್ಕೆ ನಡೆಯಲಿದೆ ಎಂದು ಜಿಲ್ಲಾ ಮಡಿವಾಳ ಮಾಚಿದೇವ ಸಮಾಜದ ಅಧ್ಯಕ್ಷ ಎಂ.ನಾಗೇಂದ್ರಪ್ಪ ತಿಳಿಸಿದ್ದಾರೆ.

## ಕೊರೊನಾ ಸಾವು 300ಕ್ಕಿಂತ ಕಡಿಮೆ

ನವದೆಹಲಿ, ಜ. 19 - ಕಳೆದ 16 ದಿನಗಳಿಂದ ದೇಶದಲ್ಲಿ ಪ್ರತಿನಿತ್ಯದ ಕೊರೊನಾ ಸಾವಿನ ಸಂಖ್ಯೆ 300ಕ್ಕೂ ಕಡಿಮೆ ಇದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ದೇಶದಲ್ಲಿ 2.23 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ. ಭಾನುವಾರ 201 ಜನರು ಕೊರೊನಾದಿಂದ ಸಾವನ್ನಪ್ಪಿದ್ದಾರೆ.

## ಪತನಗೊಂಡಿದ್ದ ಇಂಡೋನೇಷಿಯಾ ವಿಮಾನದ ಅವಶೇಷಗಳು ಪತ್ತೆ

ಜಕಾರ್ತಾ, ಜ. 10 – ಜಾವಾ ಸಮುದ್ರದಲ್ಲಿ ಪತನವಾಗಿದ್ದ ಇಂಡೋನೇಷಿಯಾ ವಿಮಾನದ ಅವಶೇಷಗಳು ಭಾನುವಾರ ಪತ್ತೆಯಾಗಿವೆ. ಪತನವಾದ ವಿಮಾನದಲ್ಲಿ 62 ಜನರಿದ್ದರು.

ವಿಮಾನದ ಬ್ಲಾಕ್ ಬಾಕ್ಸ್‌ಗಳಿರುವ ಜಾಗ ಪತ್ತೆಯಾಗಿದೆ. ನೌಕಾ ದಳದ ಸೋನಾರ್ ಸಿಸ್ಟಮ್ ಮೂಲಕ ವಿಮಾನದ ಅವಶೇಷ ಪತ್ತೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜಕಾರ್ತಾದಿಂದ ಪೊಂಟಿಯಾನಕ್‌ಗೆ ತೆರಳುತ್ತಿದ್ದ ವಿಮಾನ, ಹಾರಾಟ ಆರಂಭಿಸಿದ ಕೆಲವೇ ನಿಮಿಷಗಳ ನಂತರ ಪತನಗೊಂಡಿತ್ತು. ಪತನಕ್ಕೆ ಕಾರಣವೇನು ಎಂಬುದು ಇನ್ನೂ ತಿಳಿದು ಬಂದಿಲ್ಲ. ವಿಮಾನ ಪತನದಲ್ಲಿ ಯಾರಾದರೂ ಬದುಕಿದ್ದಾರೆಯೇ ಎಂಬ ಸುಳಿವು ಇನ್ನೂ ಸಿಕ್ಕಿಲ್ಲ.


**ಬಾಪೂಜಿ ವಿದ್ಯಾ ಸಂಸ್ಥೆ**

ಪಿ.ಜೆ.ಬಡಾವಣೆ, ದಾವಣಗೆರೆ–577002.

ದೂರವಾಣಿ: (08192) 251302, 250659, 253550, 230236. ಫ್ಯಾಕ್ಸ್–91–8192–231201

**ಹರಾಜು ನೋಟೀಸ್**

ಬಾಪೂಜಿ ವಿದ್ಯಾ ಸಂಸ್ಥೆಯ ಅಂಗಸಂಸ್ಥೆಗಳ ಹೆಸರಿನಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ನೋಂದಾವಣೆ ರದ್ದುಪಡಿಸಲ್ಪಟ್ಟ ಈ ಕೆಳಕಂಡ ವಾಹನವನ್ನು ಹರಾಜು ಮೂಲಕ ಕೆಳಕಂಡ ನಿಬಂಧನೆಗೊಳಪಟ್ಟು ದಿ : 13.01.2021 ಬುಧವಾರ ಸಂಜೆ 4.30ಕ್ಕೆ ಬಾಪೂಜಿ ದಂತ ವೈದ್ಯಕೀಯ ಕಾಲೇಜಿನ (ಸೆಮಿನಾರ್ ಹಾಲ್)ನಲ್ಲಿ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ವಾಹನವನ್ನು ಅದೇ ದಿನಾಂಕ ಬೆಳಿಗ್ಗೆ 10.00 ಗಂಟೆಯಿಂದ ಬಾಪೂಜಿ ದಂತ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ನೋಡಬಹುದಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಬಾಪೂಜಿ ದಂತ ವೈದ್ಯಕೀಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಬಾಪೂಜಿ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲರ ಹೆಸರಿನಲ್ಲಿರುವ (Eicher Company School Bus). ನೊಂದಾವಣೆ ಸಂಖ್ಯೆ : KA 17A –1304 ನೊಂದಾವಣೆ ವರ್ಷ 2005.

ಹರಾಜಿನಲ್ಲಿ ಭಾಗವಹಿಸುವವ ಕೆಳಕಂಡ ಷರತ್ತುಗಳಿಗೊಳಪಟ್ಟಿರುತ್ತಾರೆ.

1. ಹರಾಜಿನಲ್ಲಿ ಭಾಗವಹಿಸುವವರು ರೂ. 10,000/– (ಹತ್ತು ಸಾವಿರ ರೂಪಾಯಿ)ಗಳನ್ನು ನಗದಾಗಿ ಹರಾಜಿಗೆ ಮುನ್ನ ಠೇವಣಿ ಇಟ್ಟು ರಸೀದಿ ಪಡೆದವರಾಗಿರಬೇಕು.
2. ಹರಾಜು ಯಾರಿಗೆ ನಿಲ್ಲುತ್ತದೆಯೋ ಅವರು ಕೊಳ್ಳಲು ಒಪ್ಪಿದ ಮೊಬಲಗಿನ ಶೇಕಡಾ 25% ಭಾಗದ ಹಣವನ್ನು ಹರಾಜು ಮುಗಿದ ತಕ್ಷಣ ಕೊಡತಕ್ಕದ್ದು ಹಾಗೆ ಮಾಡದಿದ್ದಲ್ಲಿ ಹರಾಜು ರದ್ದುಗೊಳಿಸಲಾಗುತ್ತದೆ ಮತ್ತು ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಶೇಕಡಾ 25% ಭಾಗವನ್ನು ಕಟ್ಟಿದ ನಂತರ ಕೊಳ್ಳಲು ಒಪ್ಪಿದವರು ಉಳಿದ ಹಣವನ್ನು ಒಂದು ವಾರದೊಳಗೆ ಪಾವತಿ ಮಾಡಿ ಸಂಬಂಧಿಸಿದ ವಾಹನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳತಕ್ಕದ್ದು.
4. ಹಾಗೆ ಒಂದು ವಾರದಲ್ಲಿ ಉಳಿದ ಹಣವನ್ನು ಸಂಸ್ಥೆಗೆ ಕಟ್ಟಲು ತಪ್ಪಿದಲ್ಲಿ ಈ ವಿಷಯದ ಬಗ್ಗೆ ಯಾವ ನೋಟಿಸ್ ಕೊಡದೆ ಕಟ್ಟಿದ ಎಲ್ಲಾ ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
5. ಸವಾಲುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ಕೆಳ ಸಹಿದಾರರು ಕಾದಿರಿಸಿಕೊಂಡಿದ್ದಾರೆ. ಈ ವಿಷಯದ ಬಗ್ಗೆ ಯಾವುದೇ ತಕರಾರುಗಳನ್ನು ಅಂಗೀಕರಿಸುವುದಿಲ್ಲ.

ಸಹಿ/– ಡಾ.ಶಾಮನೂರು ಶಿವಶಂಕರಪ್ಪ

ಗೌರವ ಕಾರ್ಯದರ್ಶಿಗಳು


## ದುಗ್ಗಮ್ಮನ ದೇವಸ್ಥಾನದಲ್ಲಿ ಕಾರ್ತಿಕ



ದಾವಣಗೆರೆ,ಜ.10- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 12ರ ಮಂಗಳವಾರ ರಾತ್ರಿ 8.30ಕ್ಕೆ ಕಡೇ ಕಾರ್ತಿಕೋತ್ಸವ ಜರುಗಲಿದೆ ಎಂದು ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

ಕಾರ್ತಿಕೋತ್ಸವದ ಸಂದರ್ಭದಲ್ಲಿ ಶ್ರೀ ದೇವಿಯ ದರ್ಶನಕ್ಕೆ ಆಗಮಿಸುವ ಭಕ್ತರಿಗೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ನಡೆಸಲಾಗುತ್ತಿದ್ದ ದಾಸೋಹವನ್ನು ಪುನರಾರಂಭಿಸಲಾಗುವುದು. ಕೋವಿಡ್ -19 ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ದಾಸೋಹವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಇದೀಗ ಜಿಲ್ಲಾಧಿಕಾರಿಗಳ ಅನುಮತಿ ಮೇರೆಗೆ ಮತ್ತು ದೇವಸ್ಥಾನ ಟ್ರಸ್ಟ್ ಗೌರವಾಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ನಿರ್ದೇಶನದ ಮೇರೆಗೆ ದಾಸೋಹವನ್ನು ಪುನರಾರಂಭಿಸಲು ತೀರ್ಮಾನ ಕೈಗೊಳ್ಳಲಾಗುವುದು ಎಂದು ಚನ್ನಬಸಪ್ಪ ವಿವರಿಸಿದ್ದಾರೆ.



## ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ನಾಳೆ ಕಾರ್ತಿಕ

ದಾವಣಗೆರೆ,ಜ.10- ಸ್ಥಳೀಯ ಹದಡಿ ರಸ್ತೆಗೆ ಹೊಂದಿಕೊಂಡಿರುವ ಕೆಟಿಜೆ ನಗರ 11ನೇ ತಿರುವಿನಲ್ಲಿರುವ ಶ್ರೀ ತುಳಜಾ ಭವಾನಿ ಮತ್ತು ಶ್ರೀ ಗಣಪತಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 12ರ ಮಂಗಳವಾರ ಸಂಜೆ 6.30ಕ್ಕೆ ಕಾರ್ತಿಕ ಮಹೋತ್ಸವದ ದೀಪೋತ್ಸವ ಜರುಗಲಿದೆ.

# ಕಾಯಕದಲ್ಲಿ ಶ್ರದ್ಧೆಯಿದ್ದಲ್ಲಿ ತಕ್ಕ ಪ್ರತಿಫಲ

### ಕಬ್ಬೂರು ಗ್ರಾಮದ ಸಭೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಪ್ರತಿಪಾದನೆ

ದಾವಣಗೆರೆ,ಜ.10- 'ಯಾವುದೇ ಕೆಲಸ - ಕಾಯಕವಾಗಲಿ ; ಅದನ್ನು ಶ್ರದ್ಧೆಯಿಂದ ಮಾಡಿದಾಗ ಮಾತ್ರ ಅದಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತದೆ' ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಪ್ರತಿಪಾದಿಸಿದ್ದಾರೆ.


ಇಲ್ಲಿಗೆ ಸಮೀಪದ ಕಬ್ಬೂರು ಗ್ರಾಮದಲ್ಲಿ ಮೊನ್ನೆ ನಡೆದ ಸರಳ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಗ್ರಾಮ ಸ್ಥರ ಯೋಗಕ್ಷೇಮ ವಿಚಾರಿಸಿದರಲ್ಲದೇ, ಮಳೆ - ಬೆಳೆ ಕುರಿತಂತೆ ಸೌಹಾರ್ದ ಮಾತು ಕತೆಯಲ್ಲಿ ಕಾಯಕವನ್ನು ವಿಶ್ಲೇಷಿಸಿದರು.

'ನೀವು ಯಾವುದೇ ಕೆಲಸವನ್ನು ಮಾಡಿ ; ಅದರಿಂದ ಯಾವುದನ್ನೂ ಅಪೇಕ್ಷೆ ಪಡ ಬೇಡಿ. ಅದರಲ್ಲಿ ತಲ್ಲೀನರಾಗಿ ಶ್ರದ್ಧೆಯಿಂದ ನಿರ್ವಹಿಸಿದಾಗ ಅದಕ್ಕೆ ಪ್ರತಿಫಲ ಕಟ್ಟಿಟ್ಟ ಬುತ್ತಿ' ಎಂದು ಜಿಲ್ಲಾಧಿಕಾರಿಗಳು ಉದಾಹರಣೆಯೊಂದಿಗೆ ತಿಳಿಸಿದರು.

ಈ ಗ್ರಾಮಕ್ಕೆ ತಾವು ಭೇಟಿ ನೀಡಿದ ನೆನಪಿನಾರ್ಥವಾಗಿ ಗ್ರಾಮದ ಶ್ರೀಮತಿ ಕೆ. ಆರ್. ಜಯಮ್ಮ ಅವರ ಜಮೀನಿನಲ್ಲಿ ಅಡಿಕೆ ಸಸಿಯನ್ನು ನೆಟ್ಟು ನೀರೆರೆದ ಡಿಸಿ ಬೀಳಗಿ, ಇವತ್ತು ಹಾಕಿರುವ ಸಸಿ ಮುಂದೆ ಮರವಾಗಿ ಫಲ ನೀಡುತ್ತದೆ. ಅದರಂತೆಯೇ ನಮ್ಮ ಶ್ರದ್ಧಾ ಕಾಯಕದಲ್ಲೂ ಫಲ ದೊರೆಯುತ್ತದೆ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದರು.

ಪ್ರತಿಯೊಬ್ಬರೂ ತಾವು ಮಾಡುವ ಯಾವುದೇ ಕಾಯಕದಲ್ಲಿ ಶ್ರದ್ಧೆಯನ್ನಿರಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಬೀಳಗಿ ಕರೆ ನೀಡಿದರು. ಕಬ್ಬೂರು ಗ್ರಾಮದ ಮುಖಂಡರುಗಳಾದ ಕೆ.ಪಿ. ದೇವೇಂದ್ರಪ್ಪ, ಬೊಮ್ಮನಹಳ್ಳಿ ಕೆ.ಜಿ. ಗಂಗಾಧರಪ್ಪ, ಚಂದ್ರಶೇಖರಪ್ಪ, ಹೊನ್ನನಾಯ್ಕನಹಳ್ಳಿ ಬಸವರಾಜಪ್ಪ, ಆರ್.ವಿ. ಚಂದ್ರಪ್ಪ ಮತ್ತಿತರರು ಜಿಲ್ಲಾಧಿಕಾರಿಯೊಂದಿಗೆ ಸೌಹಾರ್ದ ಮಾತುಕತೆ ನಡೆಸಿದರು.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte